LEGISLATIVE BUSINESS—Bills Introduced

MADAM SPEAKER.—I have received orders of the Governor for the introduction of the following Bills.

1. The Mysore Sales Tax (Amendment) Bill, 1972.
2. The Mysore Sales Tax (Second Amendment) Bill, 1972.
3. The Motor Vehicles Taxation (Amendment) Bill 1972.
4. The Mysore Motor Vehicles Taxation and Passengers Goods (Amendment) Bill, 1972.

Sri M. Y. GHORPADE (Minister for Finance).—Madam Speaker, I beg to introduce :

(i) The Mysore Sales Tax (Amendment) Bill. 1972,

(ii) The Mysora Sales Tax (Second Amendment) Bill, 1972.

MADAM SPEAKER.—The Bills are introduced.*

Smt. E. E. VAZ (Minister of State for Food).—Madam Speaker, on behalf of the Minister for Labour, I beg to introduce the following Bills :—

(i) The Mysore Motor Vehicles Taxation (Amendment) Bill, 1972.

(ii) The Mysore Motor Vehicles (Taxation on Passengers and Goods) (Amendment) Bill, 1972.

MADAM SPEAKER.—The Bills are introduced.*

Non Official Private Members' Resolution.

re : Appointment of a Committee to review the working of the Co-operatives—*(contd.)*

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).— ಸನ್ಮಾನ್ಯ ಅಧ್ಯಕ್ಷಣಿಯವರೇ, ನಿನ್ನೆ ಖಾಸಗೀ ಸದಸ್ಯರ ನಿರ್ಣಯದಲ್ಲಿ ಸಹಕಾರ ಸಂಘಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ಹಾಗೂ ಉದ್ದೇಶವನ್ನು ಸಫಲವಾಗುವಂತೆ ಮಾಡಲು ಅವುಗಳ ಕಾರ್ಯಕ್ರಮವನ್ನು ಪರಿಶೀಲಿಸಲು ಅವುಗಳಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುವ ಮೂಲಕ ಅವುಗಳನ್ನು ಉತ್ತಮಪಡಿಸುವ ಬಗ್ಗೆ ಒಂದು ಕಮಿಟಿಯನ್ನು ನೂಚನೆಮಾಡಿದಂಥ ಮಾನ್ಯ ಶ್ರೀ ಎಸ್. ಕರಿಯಪ್ಪನವರ ಸಲಹೆಯನ್ನು ನಾನು ಪುಷ್ಟೀಕರಿಸಿ ಕೆಲವು ಲೋಪದೋಷಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಸಹಕಾರ ಸಂಘಗಳು ನಿಜವಾಗಿ, ಸರಿಯಾಗಿ ನಡೆಯಬೇಕಾದರೆ ಸರ್ಕಾರದ ಒಂದು ನಿಲುವು ಬಹಳ ಚೆನ್ನಾಗಿರಬೇಕು. ಈ ಸಹಕಾರ ಸಂಘಗಳು ನಿಜವಾಗಲೂ ಒಳ್ಳೆಯ ಪರಿಣಾಮಕಾರಿಯಾಗಬೇಕಾದರೆ ಅದರಿಂದ ಬಡವರಿಗೆ ಅನುಕೂಲವಾಗಬೇಕಾದರೆ ಬಡ ರೈತರು ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಧಾರವಾಗಬೇಕಾದರೆ ಅದರಲ್ಲಿರುವ ಲೋಪದೋಷಗಳನ್ನು ನಿಜವಾಗಲೂ

* Bills appended as annexure.

ಸರಿಪಡಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿನ್ನೆ ಸದಸ್ಯರು ಅನೇಕ ಲೋಪದೋಷಗಳನ್ನು ಕೇಳಿದರು ಕೇವಲ 10—15 ವರ್ಷಗಳಾದರೂ ಕೂಡ ಆ ಸಂಘಸಂಸ್ಥೆಗಳಲ್ಲಿ ಜನರರ್ ಬಾಡಿ ಮೀಟಿಂಗ್ ಕರೆಯದೇ ಇರುವುದು ಬಹಳ ವಿಷಾದಕರ. ಬಹುಶಃ ಸರ್ಕಾರದಲ್ಲಿ ಹೆಚ್ಚಿಗೆ ಲೋಪದೋಷಗಳಿವೆಯೆಂದು ನಾನು ಅಂದುಕೊಂಡಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳಿಂದ ಸಂಘಸಂಸ್ಥೆಗಳ ಮೇಲೆ ಏನೊಂದು ಸೂಪರ್‌ವಿಷನ್ ಇಲ್ಲ. ಈ ದಿವಸ ಸಹಕಾರ ಸಂಘಗಳು ಜೆನ್ನಾಗಿ ನಡೆಯಬೇಕಾದರೆ ಹಾಗೂ ಹೆಚ್ಚಿಗೆ ಸಾಲ ಬಡ ರೈತರಿಗೆ ದೊರೆಯಬೇಕಾದರೆ ಅದರ ಉಪಯೋಗ ನೇರವಾಗಿ ಬಡವರಿಗೆ ಸಲ್ಲಬೇಕಾದುದು ಬಹಳ ಪ್ರಾಮುಖ್ಯವಾದ ವಿಚಾರ. ಬಡವರು ಈ ದಿವಸ ಸುಗಮವಾಗಿ ಜೀವನ ಮಾಡಬೇಕಾದರೆ ಈ ಸಹಕಾರ ಸಂಘಗಳಿಂದಲೇ ಸಾಧ್ಯ. ಸಹಕಾರ ಸಂಘಗಳಲ್ಲಿ ಸುಲಲಿತವಾಗಿ ಸಾಲ ದೊರೆಯಬೇಕು. ಆ ಹಣ ರೈತರಿಗೆ ಎಲ್ಲಾ ವಿಧದಲ್ಲಿ ಯಾವ ವ್ಯವಸಾಯ ಕ್ಷೇತ್ರದಲ್ಲಾಗಲೀ ಬೇರೆ ಯಾವುದೇ ಕ್ಷೇತ್ರದಲ್ಲಾಗಲಿ, ಅವನ ಪ್ರಗತಿಗೆ ಅನುಕೂಲವಾಗಬೇಕು. ಹೀಗೆ 10–15 ವರ್ಷಗಳಾದರೂ ಕೂಡ ಕೆಲವು ಸೊಸೈಟಿಗಳಲ್ಲಿ ಹಣದ ದುರುಪಯೋಗವಾಗಿದೆ. ಅದರ ಬಗ್ಗೆ ಇದುವರೆಗೂ ಏನೂ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಬಹುಶಃ ನನಗನ್ನಿಸುತ್ತದೆ ಕೆಲವೇ ಹಳ್ಳಿಗಳಲ್ಲಿ ಇರತಕ್ಕ ಶ್ರೀಮಂತವರ್ಗದ ಮುಖಂಡರು ಒಂದೇ ಕೋಮಿನ ಜನರು ಸಹಕಾರ ಸಂಘಗಳಲ್ಲಿ ಇಂದು ತಮ್ಮದೇ ಆದ ಒಂದು ನಿಲುವನ್ನು ತೋರುತ್ತಿದ್ದಾರೆ. ಇದರಿಂದ ಸಹಕಾರ ಸಂಘಗಳಲ್ಲಿ ಇರತಕ್ಕ ಹಣ ಬಡವರಿಗೆ ಸರಿಯಾಗಿ ಸೇರುವುದಿಲ್ಲ. ಇದೇ ರೀತಿ ನಮ್ಮ ಇಡೀ ರಾಜ್ಯದಲ್ಲಿ ಎಷ್ಟೋ ಸಹಕಾರ ಸಂಘಗಳು ಅನೇಕ ಕಡೆಗಳಲ್ಲಿವೆ. ಆದರೂ ಎಲ್ಲಾ ಕಡೆಯೂ ಖಂಡಿತವಾಗಿ ಅವು ಯಶಸ್ವಿಯಾಗಿಲ್ಲ. ಕಾರಣ ಅಲ್ಲಿ ಹಣ ಸರಿಯಾದ ರೀತಿಯಲ್ಲಿ ವಿನಿಯೋಗ ಮಾಡುವುದಿಲ್ಲ. ಆ ಲೋಪದೋಷಗಳ ಬಗ್ಗೆ ಒಂದು ಸಮಿತಿಯನ್ನು ಮಾಡಿ ಅದರಲ್ಲಿ ಏನೇನು ಅನ್ಯಾಯಗಳಾಗಿವೆ, ಬಡಜನರಿಗೆ ಸರ್ಕಾರದ ಹಣ ಮಟ್ಟದೆ ಎಷ್ಟರ ಮಟ್ಟಿಗೆ ಪೋಲಾಗಿದೆ ಎನ್ನುವುದನ್ನು ತಿಳಿಯಲು ತಕ್ಷಣ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಉದಾಹರಣೆಗೆ ನನ್ನ ಕ್ಷೇತ್ರವಾದ ಆನೇಕಲ್‌ನಲ್ಲಿ 130 ರಿಂದ 140ರವರೆಗೆ ಸೊಸೈಟಿಗಳಿವೆ. ಆ ಸೊಸೈಟಿಗಳಲ್ಲಿ ಸುಮಾರು 31 ಹಾಲಿನ ಉತ್ಪಾದಕ ಸಂಘಗಳಿವೆ. ಆದರಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಹಣ ಪೋಲಾಗಿದೆ. ಬಹುಶಃ ಸರ್ಕಾರದ ಗಮನಕ್ಕೆ ತಂದರೂ ಕೂಡ ಇದುವರೆಗೂ ಏನು ಲೋಪದೋಷಗಳವೆ ಎಂಬುದನ್ನು ಸರ್ಕಾರದವರು ಕಂಡು ಹಿಡಿಯಲಿಲ್ಲ. ಅವು ಕೇವಲ ಶ್ರೀಮಂತರ ಬಲೆಗೆ ಒಳಗಾಗಿವೆ. ಅವುಗಳು ಜೆನ್ನಾಗಿ ನಡೆಯುತ್ತಾ ಇಲ್ಲವೆಂಬುದು ಸರಕಾರದ ಗಮನಕ್ಕೆ ಈಗಾಗಲೇ ಬರುತ್ತಿದೆ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಅವುಗಳಲ್ಲಿ ಏನೇನು ಲೋಪದೋಷಳು ನಡೆಯುತ್ತಿವೆಯೋ ಆ ಲೋಪದೋಷಗಳನ್ನು ಸರಿಪಡಿಸಲು ಈಗಲಾದರೂ ಒಂದು ಕಮಿಟಿಯನ್ನು ಮಾಡಿ ಆ ಕಮಿಟಿ ಮುಖಾಂತರ ಬಡ ಜನರಿಗೆ ಹಣ ಏನು ಸಿಗಬೇಕೋ ಅದು ಅವರಿಗೆ ನೇರವಾಗಿ ಸಿಕ್ಕಿ ಅವರೂ ಸಹ ಸತ್ಪ್ರಜೆಗಳಾಗಿ ಬಾಳುವುದಕ್ಕೆ ಅನುಕೂಲವಾಡಿಕೊಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ. ಎಲ್ಲ ಸೊಸೈಟಿಗಳೂ ಸಹ ಎಲ್ಲಾ ವಿಧದಲ್ಲಿಯೂ ಬಡವರ ಒಂದು ಪ್ರಗತಿಯನ್ನು ಮರೆತಿವೆ. ಎಲ್ಲಾ ವಿಧಗಳಲ್ಲಿಯೂ ಸಹಕಾರ ಸಂಘಗಳ ಮುಖಾಂತರ ಸಾಲ ಪಡೆಯುವುದಕ್ಕೆ ಬಡವರಿಗೆ ನಿಜವಾಗಲೂ ಅನುಕೂಲವೆಂದು ನಾನು ಅಂದುಕೊಂಡಿದ್ದೇನೆ. ಸಹಕಾರ ಸಂಘಗಳು ಜಾಗರೂಕತೆಯಿಂದ ನಡೆಯಬೇಕು. ಬಹುಶಃ ನನಗನ್ನಿಸುತ್ತದೆ, ತಾವು ಏನೊಂದು ಆಶ್ವಾಸನೆಯನ್ನು ಕೊಟ್ಟಿದ್ದೀರೋ ಅದರಂತೆ ಬಡಜನರು ಉದ್ಧಾರವಾಗಬೇಕು. ನಿರುದ್ಯೋಗ ಸಮಸ್ಯೆಯೂ ಸಹ ಬಗೆಹರಿಯಬೇಕು. ಸಮಾಜವಾದ ನೇರವಾಗಿ ಬರಬೇಕಾದರೆ ಸಹಕಾರ ಸಂಘಗಳು ಬಹಳ ಹೆಚ್ಚಿನ ಮಟ್ಟದಲ್ಲಿ ನಡೆದರೆ ಮಾತ್ರ ಸಾಧ್ಯವೆಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಇದೇ ರೀತಿಯಲ್ಲಿ ಈ ಒಂದು ಜಿಲ್ಲೆಯಲ್ಲಿ ಅಲ್ಲ, ಒಂದು ತಾಲ್ಲೂಕಿನಲ್ಲಿ ಅಲ್ಲ, ಇಡೀ ರಾಜ್ಯದಲ್ಲೆಲ್ಲಾ ಸಹಕಾರ ಸಂಘಗಳು ಖಂಡಿತವಾಗಿ ಹಾಗೂ ನಿಜವಾಗಿ ಒಂದು ಪ್ರಗತಿಯನ್ನು ಸಾಧಿಸಿಲ್ಲ. ಆ ರೀತಿಯಾಗಿ ಪ್ರಗತಿಯನ್ನು ಸಾಧಿಸಬೇಕಾದರೆ, ಅದರ ಸ್ಥಳಕ್ಕೆ ಹೋಗಬೇಕಾಗಿದೆ. ಸ್ಥಳಕ್ಕೆ ಹೋಗಲು ಏನಿವೆಯೋ ಅವನ್ನು ಕೆಲವೇ ಜನರು ಕಬಳಿಸುತ್ತಿದ್ದಾರೆ. ಅಂತಹ ಕಾರ್ಯಗಳು ಆಗದಂತೆ ಸರ್ಕಾರದವರು ಹೆಚ್ಚಿಗೆ ಗಮನ ತೆಗೆದುಕೊಳ್ಳಬೇಕು. ಆ ಒಂದು ಸಲಹೆಗಳು ಏನಿವೆಯೋ ಅವು ಸಹಕಾರ ಸಂಘಗಳ ಮುಖಾಂತರ ನೇರವಾಗಿ ಬಡ ಜನರಿಗೆ ಸಲ್ಲಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಸಚಿವನನ್ನು ಬೆಂಗಳೂರು ಜಿಲ್ಲೆಯಲ್ಲಿ ಕೆಲವು ಸೊಸೈಟಿಗಳ ಬಗ್ಗೆ ಕೇಳಿದಾಗ ಎಷ್ಟು ಹಣ ಪೋಲಾಗಿದೆಯೆಂಬುದನ್ನು ಅವರು ಕೇಳಲಲ್ಲ. ಕೇಳಿದರೂ ಅಂಕಿಅಂಶಗಳನ್ನು ಸರಿಯಾಗಿ ಓದಿಸಲಲ್ಲ. ನಮ್ಮಲ್ಲಿಯೇ 30–40 ಲಕ್ಷ ರೂಪಾಯಿಗಳಷ್ಟು ಪೋಲಾಗಿದೆ. ಆದರೂ ಕೂಡ ಕೆಲವೇ ಮುಖಂಡರು ಒಂದು ಬಣ್ಣದ ಮುಖವಾಡ

(ಶ್ರೀ ಎಂ. ಬಿ. ರಾಮಸ್ವಾಮಿ)

ಹಾಕಿಕೊಂಡು ಬೇರೆಬೇರೆ ವಿಧದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇವೆಂದು ಹೇಳುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಏನು ಅನ್ಯಾಯವಾಗಿದೆಯೆಂಬುದನ್ನು ತಿಳಿಯಬೇಕು. ಸೊಸೈಟಿಗಳ ಬಗ್ಗೆ ಏನು ರಿಪೋರ್ಟ್ ಬಂದಿದೆ ಎಂಬುದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ನ್ಯಾಯವನ್ನು ದೊರಕಿಸಿ ಕೊಡಬೇಕು. ಹಾಗೂ ಸರ್ಕಾರದ ಹಣ ಬಹಳ ಸುವ್ಯವಸ್ಥಿತ ರೀತಿಯಲ್ಲಿ ಬಡವರಿಗೆ, ರೈತರಿಗೆ, ಕಾರ್ಮಿಕರಿಗೆ ದೊರಕಬೇಕು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ನಮ್ಮಲ್ಲಿ ಡಿ.ಎಲ್. ಬ್ಯಾಂಕ್ಸ್ ಎಂಬುದಾಗಿ ಇವೆ. ಅಲ್ಲಿ ಒಂದು ನಣ್ಣ ಯೋಜನೆ ಇದೆ. ಅದು ಏನೆಂದರೆ, ಎರಡೂವರೆ ಎಕರೆಯುಳ್ಳ ರೈತರಿಗೆ ಸಾಲ ದೊರೆಯಬೇಕು. ಎಷ್ಟರಮಟ್ಟಿಗೆ ಅಲ್ಲಿ ಬಡ ರೈತರು ಇದರಿಂದ ಉಪಯೋಗ ಪಡೆಯುತ್ತಿದ್ದಾರೆಂಬುದು ಶಂಕೆಯಾಗಿದೆ. ಈಗಲಾದರೂ ಅದರಲ್ಲಿರತಕ್ಕ ದೋಷಗಳು ಪರಿಹಾರವಾಗಬೇಕು. ಕೃಷಿಕನಾದವನು ಪ್ರಗತಿದಾಯಕವಾಗಿ ಇರುವಂತೆ ಮಾಡಲು ವ್ಯವಸ್ಥೆಯಾಗಬೇಕು. ಬಡವರಿಗೆ ನಿಜವಾಗಿ ಸರ್ಕಾರದ ಸವಲತ್ತನ್ನು ಕೊಡಬೇಕು. ಅದು ನೇರವಾದ ರೀತಿಯಲ್ಲಿ ಅವರಿಗೆ ತಲುಪಬೇಕಾಗಿದೆಯೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದೇ ರೀತಿಯಲ್ಲಿ ಅನೇಕ ದೋಷಗಳಿಂದ ಕೂಡಿರತಕ್ಕ ಸಹಕಾರ ಸಂಘಗಳ ಎಲೆಕ್ಷನ್ ಒಗ್ಗೆ ಮೇಲ್ವಿಚಾರಕರನ್ನು ನೇಮಿಸಬೇಕು. ಅವರು ತಜ್ಞರಾಗಿ ಇರಬೇಕು. ಅವರು ಹೆಚ್ಚಿನ ಮಟ್ಟದಲ್ಲಿ ಕಾರ್ಯರಂಗದಲ್ಲಿ ನಿರತರಾಗಿರಬೇಕು. ಅಂತಹವರನ್ನು ಹಾಕಿದರೆ ಈ ದೋಷಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

4-00 P.M.

ಅನೇಕ ಸಹಕಾರ ಸಂಘಗಳ ಬಗ್ಗೆ ಅಲ್ಲಿ ನಡೆಯತಕ್ಕ ದೋಷದೋಷಗಳ ಬಗ್ಗೆ ಸರ್ಕಾರಕ್ಕೆ ಎಷ್ಟೇ ದೂರುಗಳನ್ನು ಕೊಟ್ಟರೂ ಅತ್ಯಕಡೆಗೆ ಸರ್ಕಾರದವರು ತಮ್ಮ ಲಕ್ಷವನ್ನೇ ಕೊಡುತ್ತಿಲ್ಲ. ಆದರೆ ಇದು ಹಿಂದಿನ ಸರ್ಕಾರದಲ್ಲಿದ್ದ ಒಂದು ದೋಷ. ಈಗಿನ ಸಚಿವರು ಹಾಗಿಲ್ಲ. ಇವರು ಕೂಡಲೇ ಸೂಕ್ತ ಕ್ರಮಗಳನ್ನು ಕೈಗೊಂಡು ಈ ದೋಷದೋಷಗಳನ್ನೆಲ್ಲಾ ಸರಿಪಡಿಸುತ್ತಾರೆಂದು ನಾನು ನಂಬಿದ್ದೇನೆ. ಇನ್ನು ಈ ಸಹಕಾರ ಸಂಘಗಳಲ್ಲಿ ನಡೆಯತಕ್ಕ ದೋಷದೋಷಗಳ ಬಗ್ಗೆ ಅನೇಕ ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಗ್ರಾಮಾಂತರ ಮಟ್ಟಗಳಲ್ಲಿರತಕ್ಕ ಸಹಕಾರ ಸಂಘಗಳಿಂದ ಹಿಡಿದು ಜಿಲ್ಲಾ ಮಟ್ಟದ ಸಂಸ್ಥೆಗಳವರೆಗೂ ಅಲ್ಲಿ ಪ್ರೆಸಿಡೆಂಟರಾಗಲೀ ಅಥವಾ ಡೈರೆಕ್ಟರಾಗಲ ಯಾರೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದಕ್ಕಾಗೇ ಶ್ರೀ ಕೋಣಂದೂರು ಲಿಂಗಪ್ಪನವರು ಈ ಸಹಕಾರ ಸಂಸ್ಥೆಗಳೆಲ್ಲಾ ಈ ದಿವಸ ಸಾಹುಕಾರಿ ಸಂಸ್ಥೆಗಳಾಗಿವೆ ಎಂದು ಹೇಳಿದ್ದನ್ನು ನಾನೂ ಒಪ್ಪುತ್ತೇನೆ. ಈ ಸಹಕಾರಿ ಸಂಘಗಳು ಈ ದಿವಸ ಕೆಲವು ರಾಜಕಾರಿಣಿಗಳ ಕೈಲಿ ಸಿಕ್ಕಿಕೊಂಡು ಒದ್ದಾಡುತ್ತಿವೆ. ನನ್ನಲ್ಲಿ ಸಾಕಷ್ಟು ಸಾಕ್ಷ್ಯಗಳಿವೆ. ಮಾನ್ಯ ಮಂತ್ರಿಗಳು ಕೇಳಿದರೆ ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಇದನ್ನೆಲ್ಲಾ ತಪ್ಪಿಸಿ ಮಾನ್ಯ ಮಂತ್ರಿಗಳು ಬಡವರ ಹಿತರಕ್ಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಮತ್ತು ನೌಕರರು ಜನ ಹಿತೈಷಿಗಳಾಗಿ ಕೆಲಸಮಾಡುತ್ತಿಲ್ಲ. ಬಡವರಿಗೆ ಬಹಳ ಅನ್ಯಾಯವಾಗುತ್ತಿದೆ. ಸರ್ಕಾರದವರು ಇದನ್ನೆಲ್ಲಾ ಸರಿಪಡಿಸಬೇಕು. ಸರ್ಕಾರದವರು ಈ ಜಟಿಲ ಪ್ರಶ್ನೆಗಳನ್ನೆಲ್ಲಾ ಬಿಡಿಸಿ ಹಣ ಪೋಲಾಗುತ್ತಿರುವುದನ್ನು ತಡೆಗಟ್ಟಿ ಜನರಿಗೆ ಅನುಕೂಲ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನಗೆ ಎಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರಿ ಬಿ. ವಿ. ಕಕ್ಕಿಲಾಯ (ಬಂಟವಾಳ).—ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲಿ ಈ ಸಹಕಾರ ಸಂಘಗಳೇನಿವೆ ಇವು ಇನ್ನೂ 65 ವರ್ಷದ ಚಿಕ್ಕಮಕ್ಕಳು. ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳಾಯಿತು. ಆದಾಗ್ಯೂ ಈ ಸಹಕಾರ ಸಂಸ್ಥೆಗಳ ನಿಲವಣಿಗೆ ಒಂದು ಸರಿಯಾದ ನೆರೆಗೆ ಬಂದಿಲ್ಲ ಅನ್ನುವಂಥ ವಿಚಾರವನ್ನು ಇದೇ ಸಭೆಯಲ್ಲಿ ಅನೇಕಬಾರಿ ಇಲ್ಲಿ ಚರ್ಚೆ ನಡೆಯತಕ್ಕ ಕಾಲದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನೂ ಮತ್ತು ಈ ಶಾಖೆಯ ಪೋರ್ಟ್‌ಫೋಲಿಯೋ ಮಂತ್ರಿಗಳು ಇಬ್ಬರೂ ಕೂಡ ಈ ಸಹಕಾರ ಕ್ಷೇತ್ರಕ್ಕೂ ಮತ್ತು ಈ ಸದನಕ್ಕೂ ಹೊಸಬರು. ಆದರೆ ಇಲ್ಲಿ ಸಹಕಾರಿ ಚಳುವಳಿ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ವಿವರಿಸುತ್ತ ಕೆಲವು ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಈ ಸದನದ ಮುಂದಿಟ್ಟಿದ್ದಾರೆ. ಇದೇ

ನಭೆಯುಲ್ಲಿ ಹಿಂದೆ 1968 ರಲ್ಲಿ ಬಡ್ಜೆಟ್ ಮೇಲೆ ಭಾಷಣಗಳನ್ನು ನಡೆಸತಕ್ಕ ಕಾಲದಲ್ಲಿ ಇದರ ಮೇಲೆ ಇಲ್ಲಿ ಚರ್ಚೆಯಾಗುತ್ತಿದ್ದ ಕಾಲಕ್ಕೆ ಈ ದಿವನ ಮಾನ್ಯ ಸಚಿವರಾಗಿರತಕ್ಕ ಶ್ರೀ ಎಚ್. ಎನ್. ನಂಜೇಗೌಡರು ಈ ಸಹಕಾರ ಸಂಸ್ಥೆಗಳ ವಿಚಾರದಲ್ಲಿ ಏನು ಆ ದಿವನ ಹೇಳಿದ್ದಾರೆಂದರೆ

> "Co-operatives have become grazing grounds for unscrupulous Co-operators"

ಅಂತ ಒಂದು ಮಾತನ್ನು ಹೇಳುವುದಕ್ಕೆ ಪ್ರಾರಂಭ ಮಾಡಿ ನಮ್ಮ ರಾಜ್ಯದಲ್ಲಿ ಇರತಕ್ಕ ಅನೇಕ ಸಹಕಾರ ಸಂಸ್ಥೆಗಳಲ್ಲಿ ರಾಜ್ಯಮಟ್ಟದಲ್ಲೂ, ಜಿಲ್ಲಾಮಟ್ಟದಲ್ಲೂ ಮತ್ತು ಪ್ರಾದೇಶಿಕ ಮಟ್ಟದಲ್ಲೂ ಎಷ್ಟರಮಟ್ಟಿನ ಅನ್ಯಾಯಗಳು ನಡೆಯುತ್ತಿವೆ, ಅಲ್ಲಿ ಲಂಚಗೂಳಿತನ ಎಷ್ಟರಮಟ್ಟಿಗೆ ನಡೆಯುತ್ತಿದೆ ಎನ್ನುವುದನ್ನು ಅವರು ಬಯಲಿಗೆಳೆದಿದ್ದಾರೆ.

ಅದೇ ರೀತಿ ಇನ್ನೊಬ್ಬ ಮಾನ್ಯ ಸದಸ್ಯರಾದ ಶ್ರೀ ಕೊಟ್ರಬಸವಯ್ಯ ನೋಗಿ ಅವರು ಮಾತನಾಡುತ್ತ ಈ ಸಹಕಾರ ಸಂಸ್ಥೆಗಳ ಬಗ್ಗೆ ಹೀಗೆ ಹೇಳಿದ್ದಾರೆ :—

> "ಸಹಕಾರಿ ಸಂಘವದು ದೊಡ್ಡ ಜಾತ್ರೆ
> ಅದಕ್ಕೆ ದೊರೆಯುವ ಹಣವು ಅಕ್ಷಯ ಪಾತ್ರೆ
> ಸಣ್ಣವರು ಒಡಾಡಿ ಮಾಡಿದರು ಯಾತ್ರೆ
> ಸಿಗಲಿಲ್ಲ ಇವರಿಗೆ ಜಿಡ್ಡಿಗೂ ಪಾತ್ರೆ"—ಎಂದು.

ಹೀಗೆ ಅವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಿ ಈ ಸಂಸ್ಥೆಗಳು ಯಾವರೀತಿ ಈದಿವನ ರಾಜ್ಯದಲ್ಲಿ ಶ್ರೀಮಂತರ ಕೈಗೊಂಬೆಗಳಾಗಿವೆ ಎನ್ನುವುದನ್ನೂ ಮತ್ತು ಇವುಗಳಿಂದ ಯಾರಿಗೆ ಸಹಾಯ ಸಿಗಬೇಕಾಗಿತ್ತೋ ಅಂಥವರಿಗೆ ಅಂದರೆ ಬಡ ರೈತರಿಗೆ, ಸಣ್ಣ ಕಸುಬಿನವರಿಗೆ ಯಾವ ಸಹಾಯವೂ ಆಗದೆ ಇವು ಶ್ರೀಮಂತರ ಕೈಗೊಂಬೆಗಳಾಗಿವೆ ಎಂಬುದನ್ನೂ ಹೇಳಿದ್ದರೆ. ಅದೇ ರೀತಿ 1969ರ ಬಡ್ಜೆಟ್ ಕಾಲದಲ್ಲಿ ನಡೆದ ಚರ್ಚೆಯಲ್ಲಿ ಈ ದಿವನ ಮಾನ್ಯ ಅಧ್ಯಕ್ಷಣಿಯರಾಗಿರತಕ್ಕವರು—ಅಂದರೆ ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತಾ, 'ಕಾಮಧೇನು ಕಲ್ಪವೃಕ್ಷದಂತೆ ಇರಬೇಕಾಗಿದ್ದ ಈ ಸಹಕಾರ ಸಂಸ್ಥೆಗಳು ಈ ದಿವನ ಯಾರ ಯಾರ ತಲೆಯನ್ನೊ ಬೋಳಿಸತಕ್ಕ ಸಂಸ್ಥೆಗಳಾಗಿವೆ, ಎಂಬುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗೇ ಇಂದು ಸಚಿವರಾಗಿರತಕ್ಕ ಮಾನ್ಯ ಕೆ. ಎಚ್. ಪಾಟೀಲರು ಈ ಸದನದ ಸಾಮಾನ್ಯ ಸದಸ್ಯರಾಗಿ 1970ರಲ್ಲಿ ತಮ್ಮ ಭಾಷಣ ಮಾಡುತ್ತ, ಶ್ರೀ ಪಿ. ಎಂ. ನಾಡಗೌಡರ ಬಗ್ಗೆ ಕೆಲವು ಗಂಭೀರವಾದ ಆಪಾದನೆಗಳನ್ನು ಮಾಡಿ ಹಣವನ್ನು ಸರಿಯಾಗಿ ಈ ಸಂಸ್ಥೆಗಳು ವಸೂಲಾಗಿಸದೆ ಹಣವನ್ನು ದುರುಪಯೋಗ ಮಾಡಿರಾಗಿದೆ ಎಂದು ಮಾತನಾಡತಕ್ಕ ಸಮಯದಲ್ಲಿ ಕೆಲವು ಉದಾಹರಣೆಗಳನ್ನು ಕೊಟ್ಟು ಅವರು ಮಾತನಾಡಿದ್ದಾರೆ. ಇವರ ಭಾಷಣಕ್ಕೆ ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಶ್ರೀ ನಾಡಗೌಡರು ಬಹಳ ಗಂಭೀರವಾದ ಕೆಲವು ವಿವರಗಳನ್ನು ಕೊಡುತ್ತಾ, ಶ್ರೀ ಕೆ. ಎಚ್. ಪಾಟೀಲರೂ ಕೂಡ ಅಷ್ಟೇ ಗಂಭೀರವಾದ ಆರೋಪಗಳಿಗೆ ಒಳಗಾಗಿದ್ದಾರೆಂದು ಅವರ ಲೋಪಗಳನ್ನೂ ಕೂಡ ಹೊರೆಗೆಳೆದರು. ಆ ವಾದವಿವಾದಗಳನ್ನು ನೋಡಿದರೆ ಏನು ಇವರಿಬ್ಬರೂ ಈ ವ್ಯವಹಾರದಲ್ಲಿ ಪಾಲುಗಾರರೇನೋ ಅನ್ನುವಂತೆ ಭಾಸವಾಗುತ್ತದೆ. ಇದೇ ಸಂದರ್ಭದಲ್ಲಿ ಆಗ್ಗೆ ಮಂತ್ರಿಗಳಾಗಿದ್ದ ಶ್ರೀ ವಿಠಲದಾಸ ಸೆಟ್ಟರು ಕೆಲವು ಬಹಳ ಸ್ವಾರಸ್ಯವಾದ ವಿಚಾರಗಳನ್ನು ಹೊರಗಡವಿಟ್ಟಿದ್ದಾರೆ. ಆಗ್ಗೆ ಸಭೆಯಲ್ಲಿ ಚರ್ಚೆ ನಡೆಯುತಕ್ಕ ಕಾಲದಲ್ಲಿ ಶ್ರೀ ಎಸ್.ಎಂ. ಕೃಷ್ಣನ್ ಅವರು ಮಾತನಾಡುತ್ತಾ, ಈ ಸಹಕಾರ ಸಂಘಗಳು ಬಡವರಿಗೆ ಮಾರಾಟ ಮಾಡತಕ್ಕ ಅಕ್ಕಿಯಲ್ಲಿ ನುಚ್ಚು, ತೌಡು ಮತ್ತು ಕಲ್ಲುಬೆರಿಸಿ ಅಕ್ಕಿಯನ್ನು ಮಾರಾಟ ಮಾಡುತ್ತಿವೆ, ಆದರೆ ಸಹಕಾರ ಸಂಘಕ್ಕೆ ಪಕ್ಕದಲ್ಲೇ ಇರತಕ್ಕ ಇನ್ನೊಂದು ಖಾನಗೀ ಅಂಗಡಿಯಲ್ಲಿ ಒಳ್ಳೆ ಅಕ್ಕಿ ಸಿಕ್ಕುತ್ತಿದೆ ಎಂದು ಆಪಾದನೆ ಮಾಡಿದಾಗ ಶ್ರೀ ವಿಠಲದಾಸ ಸೆಟ್ಟರು ಅದಕ್ಕೆ ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಸ್ಪಷ್ಟವಾಗಿ ಅವರ ಮನೋಭಾವದಲ್ಲಿ ಏನು ಈ ವಿಚಾರದಲ್ಲಿ ಒಂದು ಭಾವನೆ ಇತ್ತೋ ಬಹುಶಃ ಅದೇ ಭಾವನೆಯನ್ನೆ ಅವರು ವ್ಯಕ್ತಪಡಿಸಿರಬಹುದೇನೋ ಅನ್ನುವಂತೆ ಅವರು ಏನು ಹೇಳಿದ್ದಾರೆಂದರೆ—ಬಡವರಿಗೆ ಅಕ್ಕಿಯನ್ನು ಮಾರಾಟ ಮಾಡತಕ್ಕ ಸಹಕಾರಿ ಸಂಘಗಳೇನಿವೆ ಅವುಗಳು ಬಡವರಿಗೆ ಕೊಡತಕ್ಕ ವಸ್ತುಗಳಲ್ಲಿ ನುಚ್ಚು, ತೌಡು ಅವು ಇರಲೇಬೇಕು, ಆದರೆ ಶ್ರೀಮಂತರಿಗೆ ಕೊಡತಕ್ಕ ವಸ್ತುಗಳಲ್ಲಿ ಅವು ಇರಲಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಇಂಥ ಒಂದು ಘೋರಣಿ ಸರ್ಕಾರದಲ್ಲಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಸರ್ಕಾರದವರು ಒಂದು ತತ್ವಕ್ಕೆ ಒಪ್ಪಿಕೊಂಡ ಮೇಲೆ

(ಶ್ರೀ ಬಿ. ವಿ. ಕಕ್ಕಿಲಾಯ)

ಸಹಕಾರ ಸಂಘಗಳು ಅವು ಬಡವರಿಗೇ ಇರಲಿ ಅಥವಾ ಶ್ರೀಮಂತರಿಗೇ ಇರಲಿ ಅವುಗಳನ್ನು ನ್ಯಾಯವಾದ ರೀತಿಯಲ್ಲಿ ಪೋಷಣೆ ಮಾಡಿಕೊಂಡು ಬರಬೇಕಾದ್ದು ಸರ್ಕಾರದವರ ಕರ್ತವ್ಯ. ಅದನ್ನು ಕೈ ಬಿಟ್ಟು ಬಡವರಿಗೆ ಸಾಮಾನುಗಳನ್ನು ಮಾರಾಟ ಮಾಡತಕ್ಕ ಸಂಸ್ಥೆಗಳು ಅವು ಏನು ಬೇಕಾದರೂ ಮಾಡಲಿ ಎಂಥ ಸಾಮಾನುಗಳನ್ನಾದರೂ ಮಾರಾಟ ಮಾಡಲಿ ಅದು ಸರ್ಕಾರಕ್ಕೆ ಸಂಬಂಧವಿಲ್ಲ ಆದರೆ ಅದರಿಂದ ಲಾಭ ಬಂದರೆ ಸಾಕು ಅನ್ನುವಂಥ ಉದ್ದೇಶವನ್ನು ಹೊಂದಿರುವುದು ಮಂತ್ರಿಗಳ ಹೇಳಿಕೆಯಿಂದ ಅರ್ಥಮಾಡಿಕೊಳ್ಳಬೇಕಾಗಿದೆ. ಇದು ಸರ್ಕಾರದಿಂದ ಸಹಕಾರ ಸಂಸ್ಥೆಗಳಿಗೆ ದೊರೆಯತಕ್ಕ ಪ್ರೋತ್ಸಾಹ ಮತ್ತು ರಕ್ಷಣೆ. ಮಾನ್ಯ ಸಚಿವರಲ್ಲಿ ವಿನಂತಿಮಾಡುವುದಿಷ್ಟೆ. ಈ ಸಹಕಾರ ಚಳವಳಿಯ ಬಗ್ಗೆ ಕೂಲಂಕಷವಾದ ಪುನರ್‌ಪರಿಶೀಲನೆಯಾಗಬೇಕಾದ್ದು ಅಗತ್ಯವಾಗಿದೆ. ಇವತ್ತಿನ ಚೌಕಟ್ಟಿನಲ್ಲಿ ಇವತ್ತಿನ ಸಮಾಜದ ಸಂಘಗಳಲ್ಲಿ ಈ ಸಹಕಾರಿ ಸಂಸ್ಥೆ ಯಾವ ಪಾತ್ರ ವಹಿಸಬೇಕು ಎಂಬುದನ್ನು ಪೂರ್ವಭಾವಿಯಾಗಿ ಸರಕಾರದವರು ನಿರ್ಧಾರಮಾಡಬೇಕು. ಸಹಕಾರಿ ಸಂಘಗಳನ್ನು ನಮ್ಮ ದೇಶದಲ್ಲಿರುವ ಪಾಳೆಯಗಾರಿ ಹಿತಾಸಕ್ತಿಗಳು, ಜಮೀನುದಾರಿ ಹಿತಾಸಕ್ತಿಗಳು, ಅಥವ ಬಾನಗಿ ಹಿತಾಸಕ್ತಿಗಳು ಇವರ ನೇತೃತ್ವದಲ್ಲಿ ನಡೆಸುವುದಾದರೆ, ಇವರ ಕೈವಾಡ ಅವುಗಳಲ್ಲಿರುವುದಾದರೆ ಆ ರೀತಿ ನಡೆಸದೆ ಬಿಡುವುದು ಒಳ್ಳೆಯದು. ಬಂಡವಾಳಗಾರರು ಮತ್ತು ಜಮೀನುದಾರರ ಹಿತಕ್ಕೆ ಒಳಗಾದವರಿಂದ ದೇಶೋದ್ಧಾರವಾಗಲು ಸಾಧ್ಯವಾಗುವುದಿಲ್ಲ. ಇದನ್ನು ಪೂರ್ಣವಾಗಿ ನಿರ್ಮೂಲಮಾಡಲು ಹೋರಾಟ ಮಾಡಬೇಕು. ಆ ಉದ್ದೇಶವಿದ್ದರೆ, ಸಂಘಗಳನ್ನು ಚೆನ್ನಾಗಿ ನಡೆಸಬೇಕೆಂಬ ಅಭಿಪ್ರಾಯವಿದ್ದರೆ ನಡೆಸುವುದು ಒಳ್ಳೆಯದು. ತಮ್ಮ ಉದ್ದೇಶ ಇದಲ್ಲ. ಈ ದಿವಸದ ಚೌಕಟ್ಟಿನಲ್ಲಿ ಸಮಾಜವಾದಿ ನಿರ್ಮಾಣ ಮಾಡುವ ಪ್ರಯತ್ನವಿದೆ ಎಂದು ಹೇಳುವುದು. ಸಮಾಜವಾದಿ ಸಮಾಜ ರಚಿಸುವಾಗ ಸಹಕಾರ ಸಂಘಗಳ ಪರಿವರ್ತನೆ ಸಾಧಿಸಿ ಅದರ ಉಪಕರಣವಾಗಿ ಈ ಸಂಘಗಳನ್ನು ನಡೆಸಬೇಕೆಂಬ ಒಂದು ಒಳ್ಳೆಯ ಉದ್ದೇಶ ತಮಗಿದೆ ಎಂದು ಭಾವಿಸುತ್ತೇನೆ. ಆ ರೀತಿ ಇದ್ದರೆ ಈ ಸಂಘಗಳಿಗೆ ಮೂಲ ಭೂತವಾದ ಸಂಘಟನೆಗೆ ಅನುಕೂಲವಾಗುವಂತೆ ನಿಯಮುಗಳನ್ನು ರಚಿಸಿ ಎಲ್ಲ ವಿಚಾರಗಳಲ್ಲೂ ಬದಲಾವಣೆಯಾಗಬೇಕಾದ್ದು ಅಗತ್ಯವಾಗಿದೆ. ಕೋನಂದೂರು ಲಿಂಗಪ್ಪನವರು ನಿನ್ನೆ ಕಾರ್ಲ್ ಮಾರ್ಕ್ಸ್ ವಿಚಾರದಲ್ಲಿ ಕೊಂಚ ಪ್ರಸ್ತಾಪಮಾಡಿದರು. ನಾನು ಅವರ ಅನುಯಾಯಿ.

[MR. DEPUTY SPEAKER in the Chair]

Mr. DEPUTY SPEAKER.—Is hon. member definite that he is speaking on the Resolution? Is it relevant to refer to Karl Marx? It was over yesterday. This resolution is about co-operatives.

Sri B. V. KAKKILAYA.—Yesterday while speaking Mr. Konandur Lingappa referred to this while speaking on Co-operation.

Angles said :

> "MARX and I never doubted that during the period of transition to socialistic economy, it will be necessary to use large scale co-operative production as an intermediate link. But this should be done so that the society consequently the state at first should retain the ownership of the means of production so that private interest and co-operative production would not prevail over the interest of the society as a whole"

ಈ ಉದಾಹರಣೆಯನ್ನು ಜನರ ಮುಂದಿಟ್ಟು ಸಹಕಾರ ಸಂಘಗಳನ್ನು ಸ್ವಯಂಸ್ಫೂರ್ತಿಯಿಂದ ಸ್ವಯಂಪ್ರೇರಣೆಯಿಂದ ಉತ್ಪಾದಕರು ಸಂಘಗಳಲ್ಲಿ ಸೇರಿ ಅಥವ ದೊಡ್ಡ ಬಂಡವಾಳಗಾರರು ಮತ್ತು ಜಮೀನುದಾರರು, ಕೈಗಾರಿಕೆಗಳಲ್ಲಿ ನಿರತರಾಗಿರುವವರು ಸೇರಿ ಹೆಚ್ಚು ಲಾಭದಾಯಕವಾಗಿ ಹೇಗೆ ನಡೆಸಬಹುದು, ಹೆಚ್ಚು ಸಮಾಜಕ್ಕೆ ಉಪಯುಕ್ತವಾಗುವಂತೆ ನಡೆಸಿ ಹೇಗೆ ಉತ್ಪತ್ತಿಮಾಡಬಹುದು ಮತ್ತು ತಮ್ಮ ಜೀವನಮಟ್ಟವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು

ಎಂಬುದನ್ನು ತೋರಿಸಲು ಒಂದು ಮಾದರಿಯಾಗಿ ಸಂಘಟಿಸಬೇಕು ಮತ್ತು ನಡೆಸಬೇಕು ಎಂದು ಸ್ಪಷ್ಟವಾಗಿ ಅವರು ಹೇಳಿದ್ದಾರೆ. ಆ ಏಜೆನ್ಸಿಯವರಿಗೆ ಹೋಗುವುದಿಲ್ಲ. ಹಾಗೆ ಮಾಡಬೇಕಾದರೆ ನಮ್ಮ ದೇಶದಲ್ಲಿರುವ ಸಹಕಾರ ಸಂಘಗಳ ಪುನರ್ರಚನೆ ಮಾಡಬೇಕಾದರೆ ಮುಖ್ಯವಾಗಿ ನಮ್ಮಲ್ಲಿರುವ ಸಮಗ್ರ ಪ್ರಾಡ್ಯೂಸರ್ಸ್, ಅಗ್ರಿಕಲ್ಚರ್, ಇಂಡಸ್ಟ್ರಿ, ಹ್ಯಾಂಡಿಕ್ರಾಫ್ಟ್ಸ್‌ನ ಮುಂತಾದುವುಗಳಲ್ಲಿ ನಿತರರಾಗಿರುವವರು, ಬಂಡವಾಳಗಾರರು ನಷ್ಟವಿಲ್ಲದೆಯಾಗದ ರೀತಿಯಲ್ಲಿ ಇದಕ್ಕೆ ಬೇಕಾದ ಎಲ್ಲ ಸಾಲತ್ತು ಸಹಕಾರದಿಂದ ಪಡೆದು ಇದನ್ನು ನಡೆಸಲು ಸಾಧ್ಯವಾಗುವ ರೀತಿಯಲ್ಲಿ ಈ ಸಂಘಗಳನ್ನು ಸಂಘಟಿಸಬೇಕು ಎಂಬುದೇ ಬಹಳ ಮುಖ್ಯವಾದ ಅಂಶ. ಬಹಳ ವ್ಯಸನದಿಂದ ಹೇಳಬೇಕಾದರೆ ಈ ದಿವಸತನಕ ಕೈಗೆ ಬಂದ ವೇರ್‌ಹೌಸಿಂಗ್ ಕಾರ್ಪೊರೇಷನ್ನಿನ ವಂದಿಯಲ್ಲಿ ಅಧ್ಯಕ್ಷರ ಭಾಷಣದಲ್ಲಿ ಇರುವುದನ್ನು ನೋಡಿದರೆ ಒಂದು ಅಂಶದ ಕಡೆಗೆ ಗಮನ ಸೆಳೆಯಬೇಕಿನಿಸುತ್ತದೆ. ಸಹಕಾರ ಸಂಘಗಳಿಗೆರ ಜಕೀಯದಿಂದ, ಸಮಾಜದಿಂದ ಮತ್ತು ಖಾಸಗಿ ವ್ಯಾಪಾರಸ್ಥರ ಒಂದು ಪೈಪೋಟಿಯಿಂದ ಯಾವರೀತಿ ನಷ್ಟವಾಯಿತು, ಚಾವಳಿ ಹೇಗೆ ಕುಂಠಿತವಾಯಿತು ಎಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. 68-69 ರಲ್ಲಿ ಸರಕಾರದ ವೇರ್‌ಹೌಸಿಂಗ್ ಕಾರ್ಪೊರೇಷನ್‌ಗೆ ಸರಕಾರದ ಸರಕುಗಳಿಂದ 21495·5 ನಷ್ಟ ಆಗಿದ್ದರೆ 69-70 ರಲ್ಲಿ 31551·8 ಆಯಿತು. ಪ್ರೈವೇಟ್ ಅಪರೇಟರ್ಸ್‌ಗೆ 14441·6 ರಿಂದ 24563·4 ರವರೆಗೆ ನಷ್ಟ ಆಯಿತು. ಇದೇ ಸಮಯದಲ್ಲಿ ಕೋ-ಆಪರೇಟಿವ್ ಸೆಕ್ಟರ್‌ನಲ್ಲಿ 10677 ರಿಂದ 5964·4ಕ್ಕೆ ನಷ್ಟ ಇಳಿಯಿತು. ಇದರಿಂದ ವೇರ್‌ಹೌಸಿಂಗ್ ಕಾರ್ಪೊರೇಷನ್ ಕೋ-ಆಪರೇಟಿವ್ ಸೊಸೈಟಿಯೊಂದಿಗೆ ಪೈಪೋಟಿ ಮಾಡುವುದು ಕಡಮೆಯಾಯಿತು ಎಂದು ಭಾವವಾಗುತ್ತದೆ. ಕಳೆದ ಎರಡುಮೂರು ವರ್ಷಗಳಲ್ಲಿ ವ್ಯವಹಾರ ನೋಡಿದರೆ ಲಂಚಕೋರತನದಿಂದ ಹಣದ ದುರುಪಯೋಗದಿಂದ ಮತ್ತು ಇನ್ನೂ ಅನೇಕ ನಡವಳಿಕೆ ಸರಿಯಾಗಿಲ್ಲದಿರುವ ಕಾರಣದಿಂದ ಅನೇಕ ಸಂಘಗಳು ಕೆಳಮಟ್ಟಕ್ಕೆ ಇಳಿದಿವೆ ಎಂಬುದು ಗೊತ್ತಾಗುವುದು. ಇನ್ನು ಮುಂದೆ ಇವುಗಳನ್ನು ನಡೆಸುವಾರದೆಂದು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಂದೊಂದು ಸಂಘದಲ್ಲಿ ಒಂದೊಂದು ರೀತಿಯ ಪ್ರತ್ಯೇಕವಾದ ಸಮಸ್ಯೆಗಳಿವೆ. ಮೇಲಿನಿಂದ ಕೆಳಗಿನವರಗೆ ಸರಿಯಾದ ಒಂದು ಎನ್‌ಕ್ವೈರಿಯಾಗಬೇಕು. ಆಡಾಗುವಾಗ ದಯವಿಟ್ಟು ತಮ್ಮ ಇಲಾಖೆಯಲ್ಲಿರುವ ಅಧಿಕಾರಿಗಳನ್ನು ಹಾಕಿ ಎನ್‌ಕ್ವೈರಿ ಮಾಡುತ್ತೇವೆಂದು ಒಂದು ನಾಟಕ ಮಾಡಬಾರದು. ಇದನ್ನು ಪರಿಶೀಲನೆ ಮಾಡಬೇಕು. ಮಾಡುವಾಗ ಈ ಸಭೆಯ ಸದಸ್ಯರನ್ನಾಗಲಿ ಅಥವ ಅವರ ಜೊತೆಗೆ ಹೈಕೋರ್ಟ್‌ನಲ್ಲಿ ತಾರಾ ಇರುವ ನ್ಯಾಯಾಧೀಶರು ಅಥವ ನಿವೃತ್ತರಾದ ಪ್ರಾಮಾಣಿಕರಾದ ಮತ್ತು ನ್ಯಾಯದ ದೃಷ್ಟಿಯಿಂದ ಒಳ್ಳೆಯ ಹೆಸರು ಪಡೆದಿರುವವರನ್ನು ಸೇರಿಸಿ ವಿಷ್ಕೃಷ್ಟವಾಗಿ ಪರಿಶೀಲನೆಯನ್ನು ಕೂಲಂಕಷವಾಗಿ ಸಹಕಾರ ಚಳವಳಿಯ ಬಗ್ಗೆ ಮಾಡಬೇಕು. ಹಾಗೆ ಮಾಡುವಾಗ ಈ ದಿವಸ ಉದ್ದೇಶವೇನಿದೆ ಹೊಸ ಸಮಾಜ ನಿರ್ಮಾಣ ಮಾಡಬೇಕೆಂಬುದು ಅದಕ್ಕೆ ಈ ಉಪಕರಣವಾಗಿ ಸೊಸೈಟಿಗಳನ್ನು ಮಾರ್ಪಾಡುಮಾಡಬೇಕು ಎಂದು ಸೂಚನೆ ಮಾಡಿ ಈ ನಿರ್ಣಯಕ್ಕೆ ಸಂಪೂರ್ಣವಾಗಿ ಬೆಂಬಲ ಕೊಡುತ್ತೇನೆ. ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ಕೃತಜ್ಞತೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ಬಂಗಿ (ಹುಮನಾಬಾದ್).—ನಿಯೋಜ್ಯ ಅಧ್ಯಕ್ಷರೇ, ಮಾನ್ಯ ಶಾಸಕರಾದ ಶ್ರೀ ಕರಿಯಪ್ಪನವರು ತಂದ ಗೊತ್ತುವಳಿಗೆ ಬೆಂಬಲ ಕೊಟ್ಟು ನನ್ನ ಸಲಹೆ ಸೂಚನೆಗಳನ್ನು ಈ ವಿಷಯದ ಬಗ್ಗೆ ಹೇಳಬಯಸುತ್ತೇನೆ.

ಈ ಸಹಕಾರ ಆಂದೋಲನವು ಹೊಚ್ಚಹೊಸದು, ಲಂಡನ್ ಶಹರನಲ್ಲಿ ಪ್ರಾರಂಭವಾಯಿತು. ಇದು ಜಗತ್ತಿನ ಆಂದೋಲನವಿದೆ. ಇದರಲ್ಲಿ ಪ್ರಜಾಪ್ರಭುತ್ವದ ತತ್ವ ಅಡಕವಾಗಿದೆ. ಒಬ್ಬ ಮೆಂಬರ್‌ನಿಗೆ ಒಂದು ಓಟ್ ಈ ತತ್ವಕ್ಕೆ ಅನುಸಾರವಾಗಿ, ಸಹಕಾರ ಸಂಸ್ಥೆಗಳ ಡೈರೆಕ್ಟರ್ ಚುನಾವಣೆಗಳು ಆಗತಕ್ಕದ್ದಿರುತ್ತವೆ. ನಾನು ಎಲ್ಲರಿಗಾಗಿ, ಎಲ್ಲರೂ ನನಗಾಗಿ ಈ ತತ್ವದ ಮೇಲೆ, ಸಹಕಾರ ಆಂದೋಲನ ರಚಿತವಾಗಿದೆ. ಪೋವೆನ್ ಎಂಬ ಓರ್ವ ಸಹಕಾರಿಯು, ಈ ಮೂಲಭೂತ ತತ್ವಗಳ ಜನಕರಾಗಿದ್ದಾನೆ. ಈ ಆಂದೋಲನವು, ಇಂಗ್ಲೆಂಡ್ ಶಹರನ್ನು ಜಗಳಿಂದ ಪ್ರಾರಂಭವಾಗಿ, ಭೂತಪರ್ಯಂತ ಕೋಗುತ್ತಿವೆ. ಸದಸ್ಯರಿಂದ ಆರಿಸಿ ಬಂದ ಡೈರೆಕ್ಟರು. ಸದಸ್ಯರಿಗೆ ಸ್ಕೂಲು, ಸಹಕಾರ ಸಂಸ್ಥೆಗಳನ್ನು ನಡೆಸುತ್ತಾರೆ. ಆದರೆ ಹಿಂದೂಸ್ಥಾನದಲ್ಲಿ ಇದು ವಿಚಿತ್ರವಾಗಿ, ಈ ಆಂದೋಲನವು ಸರಕಾರದಿಂದ ಪ್ರಾರಂಭವಾಗಿದೆ. ಮೊಟ್ಟಮೊದಲು ಕೇಂದ್ರ ಸರ್ಕಾರದವರು ಇಡೀ ಭಾರತದೇಶಕ್ಕೋಸ್ಕರ ಒಂದು ಸಹಕಾರ ಕಾನೂನಿಯನ್ನು ರಚಿಸಿ ಅಖಂಡ ಹಿಂದ ಸ್ವಾತಂತ್ರ್ಯದಲ್ಲಿ ಅದನ್ನು ಜಾರಿಯಲ್ಲಿ ತಂದರು. ತದ ನಂತರ 1925 ರಲ್ಲಿ ಸಹಕಾರ ಕಾಯಿದೆಯ ಪ್ರಾಂತೀಯ ವಿಷಯ ಮಾಡಲಾಯಿತು. ಅದಕ್ಕನುಸಾರವಾಗಿ ಬೊಂಬಾಯಿ ಸರ್ಕಾರದವರು 1925 ರಲ್ಲಿ ಮುಂಬಯಿ ಸಹಕಾರ ಕಾಯಿದೆ ರಚಿಸಿ ಅದನ್ನು ಬೊಂಬಾಯಿ ರಾಜ್ಯಕ್ಕೆ ಅನ್ವಯಿಸಲಾಯಿತು.

(ಶ್ರೀ ಪಿ. ಎಂ. ಬಂಗಿ)

ಅನಂತರ ಇವರೆ ಮೈಸೂರು ರಾಜ್ಯಕ್ಕೆ ಅನ್ವಯಿಸುವುದಕ್ಕೋಸ್ಕರ ಮೈಸೂರು ಸರ್ಕಾರದವರು ಮೈಸೂರು ಸಹಕಾರಿ ಕಾಯಿದೆ ಮಾಡಿ, ಜಾರಿಯಲ್ಲಿ ತಂದಿದ್ದಾರೆ. ಈ ಕಾಯಿದೆ ಸಮಂಜಸವಿದ್ದು, ಅದರಲ್ಲಿ ತಿದ್ದುಪಡಿ ಮಾಡುವುದು ಅವಶ್ಯಕವಿದೆ.

1. ಏಕಶ್ರ ಕುಟುಂಬದ ಮ್ಯಾನೇಜರನಿಗೆ ಮ್ಯಾನೇಜರ್ ನಾತೆಯಿಂದ ಸಹಕಾರ ಸಂಸ್ಥೆಗಳ ಸದಸ್ಯನಾಗಲು ಈ ಕಾಯಿದೆ ಮೇರೆಗೆ ಬರುವುದಿಲ್ಲ. ಯಾವುದೇ ಸದಸ್ಯನು ಮೈಯುಕ್ತಿಕವಾಗಿ ಈ ಕಾಯಿದೆ ಮೇರೆಗೆ ಸದಸ್ಯನಾಗಲು ಅರ್ಹನಾಗುತ್ತಾನೆ. ಆತನು ತನ್ನ ಏಕಶ್ರ ಕುಟುಂಬಕ್ಕೋಸ್ಕರ ಸೊಸೈಟಿ ಕಡೆಯಿಂದ ಸಾಲವನ್ನು ತೆಗೆದುಕೊಂಡರೂ ಆ ಸಾಲವನ್ನು ಹೊಣೆಯ ಬಗ್ಗೆ ಏಕಶ್ರ ಕುಟುಂಬದ ಆಸ್ತಿಯು ಅದಕ್ಕೆ ಹೊಣೆಗಾರನಾಗುವುದಿಲ್ಲ. ಆ ಆಸ್ತಿಯೊಳಗಿಂದ ಕೇವಲ ಆ ಸದಸ್ಯನ ಹಿಸ್ಸೆ ಅತನ ಪಾಲಿಗೆ ಹೊಣೆಗಾರನಾಗುತ್ತದೆ. ಇದ್ದರಿಂದ ಸೊಸೈಟಿಗೆ ಬರತಕ್ಕ ಹಣ ವಸೂಲಾಮಾಡುವುದಕ್ಕೆ ಕಷ್ಟವಾಗುತ್ತದೆ. ಸಹಕಾರ ಕಾಯಿದೆಯಲ್ಲಿ ಉಚಿತವಾಗಿ ಅವಿಂಡ್ ಮೆಂಟ್ ಮಾಡಿ ಏಕಶ್ರ ಕುಟುಂಬದ ಮೇನೇಜರ್‌ನಿಗೆ, ಮೆನೇಜರ್ ನಾತೆಯಿಂದ ಸದಸ್ಯನಾಗಲು ಅವಕಾಶ ಮಾಡಿಕೊಡಬೇಕು.

2. ಈ ಕಾಯಿದೆ ಮೇರೆಗೆ, ಭಾಗಿದಾರರ ಅಂಗಡಿಗಳಿಗೆ ಸದಸ್ಯನಾಗಲು ಬರುವುದಿಲ್ಲ. ಓರ್ವ ಪಾಲುಗಾರನು ತನ್ನ ಪರವಾಗಿ ಮಾಡಿದ ಸಾಲಕ್ಕೆ ಭಾಗಿದಾರಿ ಅಂಗಡಿಯು ಅಸ್ತಿ, ಹೊಣೆಗಾರರಾಗುವುದಿಲ್ಲ. ಆದ್ದರಿಂದ ಈ ಕಾಯಿದೆಯಲ್ಲಿ ಸೂಕ್ತ ದುರಸ್ತಿ ಮಾಡಿ, ಪಾಲುಗಾರಿಕ, ಫರ್ಮ್‌ಗಳಿಗೆ ಸದಸ್ಯರನ್ನು ಮಾಡಿಕೊಡಲು, ಅವಕಾಶ ಮಾಡಿಕೊಡಬೇಕೆಂದು ನಾನು ಸೂಚಿಸುತ್ತೇನೆ.

3. ಭೂಕಂದಾಯ (ಲ್ಯಾಂಡ್ ರೆವಿನ್ಯೂ) ವಸೂಲು ಮಾಡಿಕೊಳ್ಳಲು ಯಾವ ಪ್ರಕಾರವಾಗಿ ಲಿಮಿಟೇಷನ್ (limitation) ಕಾಯಿದೆಯ ತೊಂದರೆ ಇರುವುದಿಲ್ಲವೊ ಅದೇ ಪ್ರಕಾರವಾಗಿ ಸೊಸೈಟಿಗಳ ಬಾಕಿ, ಹಣವನ್ನು ಸಾಸ್ಕರರ ಕಾಯಿದೆಯಲ್ಲಿ ವಸೂಲು ಮಾಡಲು ಲಿಮಿಟೇಷನ್ ಕಾಯ್ದೆ ಅನ್ವಯಿಸ ಬಾರದೆಂದು, ನಮ್ಮ ಸಹಕಾರ ಕಾಯಿದೆಯಲ್ಲಿ ದುರಸ್ತಿ ಮಾಡಬೇಕೆಂದು ಸೂಚಿಸುತ್ತೇನೆ. 1925ರ ಮುಂಬೈ ಸಹಕಾರೀ ಕಾಯ್ದೆಯಲ್ಲಿ ಲಿಮಿಟೇಷನ್ ಬಾರ್ ಹೊರ ವಸೂಲು ಮೊದಲು ಇದ್ದಿದ್ದಿಲ್ಲ. ಆದ್ದರಿಂದ ನಮ್ಮ ಮೈಸೂರು ಸಹಕಾರ ಕಾಯಿದೆಯಲ್ಲಿಯೂ ಆ ಪದ್ಧತಿಯ ಬಗ್ಗೆ ಇದ್ದ ಕಲಮನ್ನು ತೆಗೆದು ಹಾಕಬೇಕೆಂದು ನಾನು ಸೂಚಿಸಬಯಸುತ್ತೇನೆ.

4. ಮೈಸೂರು ರಾಜ್ಯದಲ್ಲಿರುವ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗಳ ಡೈರೆಕ್ಟರ್‌ಗಳು ತಮ್ಮ ಹೆಸರಿನಿಂದ ತಮ್ಮ ಆಪ್ತರು ಮತ್ತು ಸ್ನೇಹಿತರ ಹೆಸರಿನಿಂದ ಬ್ಯಾಂಕಿನಲ್ಲಿರುವ ಯಾವತ್ತೂ ಹಣವನ್ನು ಸಾಲದ ರೂಪವಾಗಿ ತೆಗೆದುಕೊಂಡು ಹೋಗುತ್ತಾರೆ. ಇದರಿಂದಾಗಿ ಬಡಜನರು ದಾರಿದ್ರಿಗೆ ಆಯಾ ಬ್ಯಾಂಕುಗಳ ಸಹಯದಿಂದ ಸಾಲ ಸಿಗುವುದಿಲ್ಲ. ಆದ್ದರಿಂದ ಮೈಸೂರ ಸಹಕಾರಿ ಕಾಯಿದೆಯಲ್ಲಿ ಯೋಗ್ಯ ಜಾಮೀನು ಪಡೆದು, ಡೈರೆಕ್ಟರ ಆಗಿ ಬಯಸುವವನು ಯಾವ ರೀತಿಯಿಂದಲೂ ತನ್ನ ಹೆಸರಿನಿಂದಾಗಲಿ, ತನ್ನ ಆಪ್ತರ ಹೆಸರಿನಿಂದಾಗಲಿ ತಮ್ಮ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬಾರದೆಂದು ವಿಧಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

5. ನಮ್ಮ ಜಿಲ್ಲೆಯ ಬಂಡಿ ತಾಲ್ಲೂಕಿನಲ್ಲಿ ಸರ್ಕಾರ ಸಹಕಾರ ಸಂಘಗಳು ಕೆಲವು ಬೋಗಸ್ ಮತ್ತು ಕೆಲವು ರಿಜಿಸ್ಟರ್ಡ್ ಸೊಸೈಟಿಗಳು ಇರುತ್ತವೆ. ಇಂತಹ ಸೊಸೈಟಿಗಳ ಚಾಲಕರು ಬೋಗಸ್ ಲೆಕ್ಕ ಪತ್ರಗಳನ್ನು ಬರೆದು ಸರ್ಕಾರದ ಕಾಯಿದೆ ರಿಬೇಟ್ ರೂಪವಾಗಿ ಹಣ ಪಡೆಯುತ್ತಾರೆ. ಹೀಗೆ ಬಡವನಾಗಿದ್ದವನು ಇಂತಹ ಬೋಗಸ್ ಸಂಘಗಳ ಚಾಲಕನಾಗಿ ಸರ್ಕಾರದ ದಾರಿದ್ರ ಪಡೆದುಕೊಂಡು ರಾಜಕೀಯ ಹೊಲಗಳನ್ನು ಕೊಂಡು, ಮನೆಗಳನ್ನು ಕಟ್ಟಿ ಲಕ್ಷಾಧೀಶನಾಗಿರುತ್ತಾನೆ. ಇಂತಹವುಗಳ ಬಗ್ಗೆ ತನಿಖೆ ಮಾಡಿ ಅವುಗಳನ್ನು ಲಿಕ್ವಿಡೇಟ್ ಮಾಡಿ, ನಿಜವಾಗಿ ಕೆಲಸ ಮಾಡುವಂತಹ ಸೊಸೈಟಿಗಳಿಗೆ ಧನ ಸಹಾಯ ಮಾಡಬೇಕೆಂದು ನಾನು ಸೂಚಿಸುತ್ತೇನೆ.

6. ಸಹಕಾರ ಆಂದೋಲನವನ್ನು ಯಶಸ್ವಿ ಮಾಡಬೇಕಾದರೆ ಹಿಂದೆ ಪಟ್ಟಾಣಾ ಕಮಿಟಿ ನೇಮಿಸಿ ರಾಜ್ಯದಲ್ಲಿರುವ ಯಾವತ್ತೂ ಸೊಸೈಟಿಗಳ ಸದಸ್ಯರುಗಳ ಒಗ್ಗೆ ತಾಲೂಕೆ ಮಾಡಬೇಕೆಂದು ಮತ್ತು ಬೋಗಸ್ ಸೊಸೈಟಿಗಳನ್ನು ತೆಗೆದು ಹಾಕಿ, ನಿಜವಾದ ಸಹಕಾರ ಸಂಘಗಳಿಗೆ ಯಾವತ್ತೂ

ಸರಕಾರಗಳನ್ನು ಸರ್ಕಾರದವರು ಕೊಡಬೇಕೆಂದು ನಾನು ಸೂಚನೆ ಬಯಸುತ್ತೇನೆ. ನಮ್ಮ ಕಡೆಗೆ ಕೈಬೀಲದಲ್ಲಿ ಇಕ್ಕದ ಮಹೀ ಮತ್ತು ರಿಬಿನರು ಪುಸ್ತಕಗಳನ್ನು ಹಾಕಿಕೊಂಡು ಲಂಕಾರ ಸೊಸೈಟಿ ಮುಂತಾದ ಹೆಸರುಗಳಲ್ಲಿ ದುರ್ಲಾಭ ಪಡೆಯುವ ದುಷ್ಟಜನಗಳಿದ್ದಾರೆ. ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಸರಕಾರ ಅಂದೋಲನವು ಯಶಸ್ವಿ ರೀತಿಯಿಂದ ಸಾಗಲು ಮಾನ್ಯ ಕರಿಯಪ್ಪನವರು ಮಾಡಿದ ಸೂಚನೆಗೆ ಬೆಂಬಲ ಕೊಡುತ್ತೇನೆ. ಆದ್ದರಿಂದ ಅವರು ತಂದ ಗೊತ್ತುವಳಿಗೆ ನನ್ನ ಬೆಂಬಲವಿದೆಯೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಹೆಚ್. ಡಿ. ದೇವೇಗೌಡ.—ಅಧ್ಯಕ್ಷರೇ, ಈಗ ಶ್ರೀಮಾನ್ ಕರಿಯಪ್ಪನವರು ತಂದಿರುವಂಥ ಖಾಸಗೀ ನಿರ್ಣಯ ಏನು ಇದೆಯಲ್ಲ ಬಹಳ ಮೆಚ್ಚತಕ್ಕಂಥಾದ್ದು, ನಾನು ಅವರಿಗೆ ಅಭಿನಂದಿಸುತ್ತಿದ್ದೇನೆ ಮತ್ತು ಅವರು ಬಹಳ ಉತ್ತಮವಾದ ಸಲಹೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಸಹಕಾರ ಸಂಘಗಳನ್ನು ಬಹಳ ಚುರುಕುಗೊಳಿಸುವುದಕ್ಕೆ ಮತ್ತು ಅದರ ಕಾರ್ಯ ಚಟುವಟಿಕೆಗಳನ್ನು ಯೋಗ್ಯ ರೀತಿಯಲ್ಲಿ ನಡೆಸುವುದಕ್ಕೆ ಬಹಶಃ ಶ್ರೀ ಕರಿಯಪ್ಪನವರು ತಂದ ಈ ಒಂದು ಅಂಶವನ್ನು ಸರ್ಕಾರದವರು ಒಪ್ಪುತ್ತಾರೆಂದು ತೀರ್ಮಾನಿಸಿದ್ದೇವೆ ಮತ್ತು ಸರ್ಕಾರದವರೂ ಕೂಡ ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಅದರ ಒಂದು ತತ್ವ ಬಹಳ ಒಳ್ಳೆಯದು. ಆದರಲ್ಲಿ ಅಡಕವಾಗಿರತ್ಕಂಥ ವಿಷಯ ಬಹಳ ಮೆಚ್ಚತಕ್ಕಂಥಾದ್ದು. ನಾನು ಇಷ್ಟು ಮಾತ್ರ ಹೇಳುತ್ತೇನೆ. ಇದರ ಬಗ್ಗೆ ಆಫೀಸಿಯಲ್ ಕಮಿಟಿ ಮಾಡಬೇಕೋ, ನಾನ್ ಆಫೀಸಿಯಲ್ ಕಮಿಟಿ ಮಾಡಬೇಕೋ ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಅವರು ಏನೆಕ್ಕೆ ರಿ ಮಾಡತಕ್ಕಂಥಾದ್ದು, ಯಾವರೀತಿ, ಎಂಬುದಕ್ಕೆ ರೂಪರೇಖೆಗಳನ್ನು ಕೊಡಬೇಕು ಅಲ್ಲಿ ನಡೆಯತ್ಕಂಥ ಅವ್ಯವಹಾರಗಳನ್ನು ತಪ್ಪಿಸುವುದಕ್ಕೆ, ಒಂದು ಸೂಚನೆ ಮಾಡಬೇಕು ಅದಕ್ಕೆ ಸರ್ಕಾರದವರು ಯಾವರೀತಿ ನಿರ್ಣಯ ತೆಗೆದುಕೊಂಡು ಏನು ವ್ಯವಸ್ಥೆ ಮಾಡುತ್ತಾರೋ ಅದನ್ನು ಅವರಿಗೇ ಬಿಟ್ಟುಬಿಡೋಣ.

ಈಗ ಸಹಕಾರಿ ಇಲಾಖೆಯಲ್ಲಿ ಬಹಳ ಜನ ಹಣ ದುರುಪಯೋಗ ಮಾಡಿದ ಕೇಸುಗಳು ಕೋರ್ಟಿನಲ್ಲಿ ಇವೆ. ಅವುಗಳನ್ನು ವಿಚಾರಣೆ ಮಾಡಿರುವುದಕ್ಕೆ ಸರ್ಕಾರದ ಮೇಲೆ ಹೆಚ್ಚು ಪ್ರಭಾವ ಬೀರುತ್ತಿದ್ದಾರೆಂದು ಕೇಳಿದ್ದೇನೆ. ಶ್ರೀಮಾನ್ ಶಂಕರ ಅಳ್ವರವರು ಅದಕ್ಕೆ ಮಾಣಯಂಕರರು ಎಂದು ನನ್ನ ನಂಬಿಕೆ ಅವರು ಸತ್ಯಸ್ಥಾಪನೆ ಮಾಡುವವರು, ಭ್ರಷ್ಟಾಚಾರ ನಡೆಸುತ್ತಾರೆಂದು ನಂಬಿದ್ದೇನೆ. ಒಂದುವೇಳೆ ಅವರಿಗೂ ಮೀರಿಸೋದು ಹೋಗಬಹುದು. ಅದಕ್ಕೆ ಒಂದು ಸೂಚನೆ ಕೊಡುವುದಕ್ಕೆ ನಿಂತಿದ್ದೇನೆ. ನಿಮ್ಮ ಪಕ್ಷದ ಪ್ರಭಾವಶಾಲಿಗಳು ಕೂಗಾರನ್ನೆ ಇನ್‌ಫ್ಲೂವೆನ್ಸ್ ಮಾಡಿದ್ದಾರೆಂದು ಕೇಳಿದ್ದೇನೆ. ನಮ್ಮ ಪಕ್ಷದ ಕಾಂಗ್ರೆಸ್ ಆಫೀಸ್ ಬೇರರ್ಸ್ ಸಹಾಯ ತೆಗೆದುಕೊಂಡು ನಿಮ್ಮ ಮುಖಕ್ಕೆ ಮಸಿ ಬಳಿಯಬೇಕೆಂದು ಇದ್ದಾರೆಂದು ಕೇಳಿದ್ದೇನೆ. ಆ ಮಾಹಿತಿಗಳ ಬಗ್ಗೆ ನನಗೆ ಕಾಗದ ಪತ್ರಗಳೂ ಬಂದಿವೆ. ಸಂಬಂಧಪಟ್ಟ ದಾಖಲಾತಿಗಳನ್ನು ಕೂಡ ತೋರಿಸಿದ್ದಾರೆ. ಅವರು ಸರ್ಕಾರದ ಮೇಲೆ ಒತ್ತಾಯ ಹಾಕಿ ಆ ಕೇಸುಗಳನ್ನು ಡಿಸ್‌ಮಿಸ್ ಮಾಡಿಸುವುದಕ್ಕೆ ಕೊಟಡಿದ್ದಾರೆ ಎಂದು ಕೇಳಿದ್ದೇನೆ.

4-30 P.M.

ಶ್ರೀ ಎಂ. ಮಲ್ಲಪ್ಪ :—ಈ ಹಂಪೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಲು ಯಾರಿಂದಲೂ ಸಾಧ್ಯವಿಲ್ಲ.

ಶ್ರೀ ಎಸ್. ಎಂ. ಶ್ರೀನಿವಾಳ ಚಂದ್ರಶೇಖರ್. ಸಹಕಾರ ಸಂಘಗಳ ಅಧ್ಯಕ್ಷರೆಲ್ಲ ಸಂಸ್ಥಾ ಕಾಂಗ್ರೆಸ್ಸಿನವರೇ!

ಶ್ರೀ ಎಚ್. ಡಿ. ದೇವೇಗೌಡ.—ಸಂಸ್ಥಾಕಾಂಗ್ರೆಸ್ಸಿನವರೇ ಇರಬಹುದು, ಬೇರೆ ಯಾರೇ ಇರಬಹುದು. ಯಾರೇ ಇರಲಿ ಅವರ ಮೇಲೆ ಗಟ್ಟಿ ಕ್ರಮ ತೆಗೆದುಕೊಳ್ಳಿ. ಸಂಸ್ಥಾ ಕಾಂಗ್ರೆಸ್ಸಿನವರಿಗೆ ರಕ್ಷಣೆ ಕೊಡಬೇಡಿ ಎಂದು ನಾನೇ ಹೇಳುತ್ತಿದ್ದೇನೆ. ಆದರೆ ನಿಮ್ಮ ಸರ್ಕಾರ ಬಂದಿದೆ ಎಂದು ನಿಮ್ಮ ಪಕ್ಷದವರಿಗೆ ಸಂಬಂಧಪಟ್ಟ ಕೇಸುಗಳನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಯಾರಾದರೂ ಪ್ರಯತ್ನ ಮಾಡಿದರೆ ಅದಕ್ಕೆ ಗಮನ ಕೊಡಬೇಡಿ. ಯಾವ ಪ್ರಭಾವಕ್ಕೂ ಮಣಿಯದೆ, ಏನೇ ರಾಜಕೀಯ ಒತ್ತಡಕ್ಕೂ ಮಂತ್ರಿಗಳು ಮಣಿಯದೆ ಕೋರ್ಟಿನಲ್ಲಿರುವ ಕೇಸುಗಳು ನಡೆಯುವುದಕ್ಕೆ ಅವಕಾಶ ಕೊಡಬೇಕು. ಸಹಸ್ರಾರು ರೂಪಾಯಿಗಳ ದುರ್ಬಳಕೆ ಮಾಡಿ ಎಷ್ಟೋ ಜನರು ಬಾವಿ ಬಚ್ಚಿ ಹಾಕಿಕೊಂಡು ಎರಡೂ ಕಡೆ ಓಡಾಡುತ್ತಿದ್ದಾರೆ

ಶ್ರೀ ಅಬ್ದೀಜ್ ಸೇಟ್.—ತಮ್ಮ ಕಾಲದಲ್ಲಿ ಹಾಕಿರುವಂಥ ಬೀಜ ಇನ್ನೂ ಏನೆ ಬಿಚ್ಚಿಲ್ಲ. ಕೂರೆ ಹೊತ್ತು ಕೊಂಡಿದ್ದೇವೆ, ನ್ಯಚ್ಛೆಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಅವರಿಗೆ ಒಂದು ಸಲಹೆ ಕೊಡಬಯಸುತ್ತೇನೆ. ಅವರ ಪಕ್ಷದವರು ಒಂದು ಭಿತ್ತಿ ಪತ್ರವನ್ನು ಅಚ್ಚು ಹಾಕಿಸಿದ್ದಾರೆ, ಏನೆಂದರೆ ಸಮಾಜವಾದದ ಹೆಸರಿನಲ್ಲಿ ಹೆಂಗನು, ಮುಕ್ಕಳ ರಕ್ಷಣೆಗೋಸ್ಕರ ಮತ್ತು ಬಡವರ ಉದ್ಧಾರಕ್ಕೋಸ್ಕರ ಕಾಂಗ್ರೆಸ್ ಪಕ್ಷವನ್ನು ಸೇರಿರಿ ಎಂದು ಹಾಕಿದ್ದಾರೆ. ಅದರ ಜೊತೆಗೆ ಇನ್ನೊಂದು ಅಂಶವನ್ನು ಸೇರಿಸಿಕೊಳ್ಳಿ, ಏನೆಂದರೆ ಸಹಕಾರ ಸಂಘಗಳಲ್ಲಿ ಅಕ್ರಮವಾಗಿ ಅಸಿ, ಸಂಗ್ರಹ ಮಾಡಿರುವವರ ರಕ್ಷಣೆಗೋಸ್ಕರ ಸೇರಬಹುದು ಎಂದೂ ಸೇರಿಸಿಕೊಳ್ಳಿ.

ನಾನು ಹೇಳುವುದಾದರೆ ಐದು ಸಹಸ್ರ ಕೇಸುಗಳು, ಡಿಫಾಲ್ಟೇಷನ್, ಹಣದ ದುರುಪಯೋಗ ಇವುಗಳಿಗೆ ಸಂಬಂಧಿಸಿದಂತೆ ಎಲ್ಲ ಪಕ್ಷದವರಿಗೆ ಸೇರಿರಬಹುದಾದವರ ಪೈರವಿಯೂ ಇದೆ. ಯಾರೇ ಇರಲಿ, ಎಂಥ ಪ್ರಭಾವಶಾಲಿ ವ್ಯಕ್ತಿಗಳೇ ಆಗಿರಲಿ, ಈ ಸಭೆಯ ಸದಸ್ಯರೇ ಆಗಿರಲಿ, ಮಂತ್ರಿಗಳೇ ಆಗಿರಲಿ, ಯಾರಿಗೂ ದಾಕ್ಷಿಣ್ಯ ತೋರಬಾರದು, ಕೇಸುಗಳನ್ನು ಹಿಂತೆಗೆದುಕೊಳ್ಳಬಾರದು. ಇದೆ ನನ್ನ ಅರಿಕೆ. ಇದರ ಕಡೆಗೆ ಹೆಚ್ಚು ಸಲಾ ಮಾನ್ಯ ಮಂತ್ರಿಗಳು ಗಮನಿಸಬೇಕು. ಮಂತ್ರಿಗಳು ಬಿಗಿ ಮುಷ್ಟಿಯಿಂದಿದ್ದಾರೆ. ಅದರ ರಾಜಕೀಯ ಒತ್ತಡಕ್ಕೆ ಮಣಿಯಬಾರದು ಎಂದು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಶಿವಮ್ಮ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ನಿರ್ಣಯ ತಂದಿರುವುದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತ ನಾನು ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಸಮಾಜವಾದ ಸಮಾಜದ ಸ್ಥಾಪನೆಗಾಗಿ ಪ್ರಯತ್ನ ಪಡುತ್ತಿದ್ದೇವೆ ಮತ್ತು ಆ ಕಡೆಗೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಹೋಗುತ್ತಿದ್ದೇವೆ. ಆ ದಿಸೆಯಲ್ಲಿ ಆರ್ಥಿಕ ಕ್ರಾಂತಿ ನಡೆಯಬೇಕಾದರೆ ಸಹಕಾರ ಚಳುವಳಿಯು ಮೂಲಕ ಎಂದು ನಾವು ಒಪ್ಪಿಕೊಂಡಿದ್ದೇವೆ. ಬಹುಶಃ ಇಂದು ಈ ಆರ್ಥಿಕ ಕ್ರಾಂತಿ ಸಹಕಾರ ಸಂಘಗಳ ಮೂಲಕ ನಡೆಯಬೇಕಾಗಿದೆ. ಅದರಲ್ಲಿಯೂ ಕೂಡ ಗ್ರಾಮಾಂತರಗಳಲ್ಲಿ ಸಹಕಾರ ಸಂಘಗಳು ಚೆನ್ನಾಗಿ ನಡೆಯಬೇಕು. ಈ ಸಹಕಾರ ಸಂಘಗಳ ಸ್ಥಿತಿಗತಿಗಳನ್ನಾದರೂ ಕೂಡ ಕೆಲವು ಕಾಲ ವಿಮರ್ಶೆ ಮಾಡಿ ನೋಡುವುದಾದರೆ ಹಣ ಕಾಸಿನ ಲೇವಾದೇವಿ ಯಾವುದೇ ಇದ್ದರೂ ಅದು ಸಹಕಾರ ಸಂಘಗಳ ಮೂಲಕ, ಮುಖ್ಯವಾಗಿ ರೈತರಿಗಾಗಿ ನಡೆಯಬೇಕಾಗಿದೆ. ಸಹಕಾರ ಸಂಘಗಳಲ್ಲಿ ಬಹುಶಃ ಮನಾಪಲಿ ರೀತಿಯಲ್ಲಿ ಅನೇಕ ವರ್ಷಗಳಿಂದ ಅನೇಕ ಜನ ಸಹಕಾರ ಸಂಘಗಳನ್ನು ತಮ್ಮ ಸ್ವತ್ತುಗಳನ್ನಾಗಿ ಮಾಡಿಕೊಂಡಿದ್ದಾರೆ. ಯಾರು ಆಫೀಸ್ ಬೇರರ್ಸ್ ಇದ್ದುತ್ತಾರೆ ಅವರ ಕೃಪಾಕಟಾಕ್ಷಕ್ಕೆ ಒಳಗಾದವರಿಗೆ ಮಾತ್ರ ಹಣಕಾಸಿನ ಅನುಕೂಲ ದೊರೆಯುತ್ತದೆ, ಬೇರೆಯವರಿಗೆ ದೊರೆಯುವುದಿಲ್ಲ. ಇದು ಕೋಗಬೇಕು.

ಮಾರ್ಕೆಟಿಂಗ್ ಸೊಸೈಟಿಗಳ ಸ್ಥಿತಿಗತಿಗಳನ್ನು ನೋಡುವುದಾದರೆ ಬಹುಶಃ ರೈತರಿಗೆ ಸರಕಾರದಲ್ಲಿ ಬೀಜ, ಗೊಬ್ಬರವನ್ನು ಒದಗಿಸುವುದಾಗಲೀ, ರೈತರಿಗೆ ಏನು ಅತ್ಯಾವಶ್ಯಕವಾಗಿ ಬೇಕೋ ಅದನ್ನು ಒದಗಿಸುವುದಾಗಲೀ ಆಗುತ್ತಿಲ್ಲ. ಎಲ್ಲ ಮಾರ್ಕೆಟಿಂಗ್ ಸೊಸೈಟಿಗಳು, ಅದರಲ್ಲಿಯೂ ನಮ್ಮ ಜಿಲ್ಲೆಯಲ್ಲಿನ ಸೊಸೈಟಿಗಳು ತಮ್ಮ ಕಾರ್ಯವಿಧಾನವನ್ನು ಕುಂಠಿತಗೊಳಿಸಿಕೊಂಡು ಕೂನೆ ಸ್ಥಿತಿಯಲ್ಲಿವೆ. ಉಸಿರಾಡುವ ಸ್ಥಿತಿಯಲ್ಲಿವೆ. ಸರಿಯಾದ ಕಾಲದಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುವುದು, ಗೊಬ್ಬರ, ಬೀಜ, ಹೆಸ್ಸಿಸ್ಕೆಡ್ಸ್ ಮುಂತಾದುವನ್ನು ತಂದು ರೈತರಿಗೆ ಒದಗಿಸುವುದರಲ್ಲಿ ಸೊಸೈಟಿಗಳು ವಿಫಲವಾಗಿವೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ರೈತರು ತಮ್ಮ ವ್ಯವಸಾಯ ಭೂಮಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ, ಬಾವಿಗಳನ್ನು ತೋಡಿಸಿಕೊಂಡು ಅವುಗಳಿಗೆ ಪಂಪ್‌ಸೆಟ್‌ಗಳನ್ನು ಹಾಕಿಕೊಂಡು ಇದರಿಂದ ಅನುಕೂಲ ಪಡೆಯುವುದಕ್ಕೆ ಹಣವನ್ನು ಕೊಡುತ್ತವೆ. ಆದರೆ ಈ ಬ್ಯಾಂಕುಗಳು ರಾಜಕೀಯದಿಂದ ತಮ್ಮ ಕಾರ್ಯವನ್ನು ಮಾಡದೆ, ಕೊಟ್ಟಂಥ ಸಾಲಗಳನ್ನು ವಸೂಲು ಮಾಡುವುದರಲ್ಲಿ ವಿಫಲವಾಗಿ ಅನೇಕ ಜನರಿಗೆ ಸಾಲ ಬೇಕಾದ ರೈತರಿಗೆ ಹಣವನ್ನು ಒದಗಿಸುವ ಸ್ಥಿತಿಯಲ್ಲಿಲ್ಲ. ಈ ಸಂಘಗಳು ಸರ್ವಿಸ್ ಕೋ-ಆಪರೇಟಿವ್ ಸೊಸೈಟಿಗಳಾಗಲೀ, ಮಾರ್ಕೆಟಿಂಗ್ ಸೊಸೈಟಿಗಳಾಗಲೀ, ಭೂ ಅಭಿವೃದ್ಧಿ ಬ್ಯಾಂಕುಗಳಾಗಲೀ ಅವುಗಳ ಚಟುವಟಿಕೆಗಳು ನಡೆಯುವ ರೈತರಿಗೆ ಏನು ಸಾಲವನ್ನು ಒಗಿಸಬೇಕು ಎಂದು ಇದೆಯೋ ಅದನ್ನು ಒದಗಿಸುವ ಕೆಲಸಕಾರ್ಯಗಳು ನಿಂತು ಹೋಗಿವೆ. ಸೊಸೈಟಿಗಳಲ್ಲಿ ಮನಾಪಲಿ ಏನಿದೆಯೋ ಅದು ಕೋಗಬೇಕು. ಎಲ್ಲ ಸೊಸೈಟಿಗಳೂ ಕೂಡ ಜನರಲ್ ಬಾಡಿ ಮೀಟಿಂಗುಗಳನ್ನು ಪ್ರತಿ ವರ್ಷವೂ ನಡೆಸಬೇಕು. ಪ್ರತಿ ವರ್ಷವೂ ಕಡ್ಡಾಯವಾಗಿ ಆಡಿಟ್ ಮಾಡಿ ಪ್ರತಿ

ಯೊಂದು ಸೊಸೈಟಿಯಲ್ಲಿಯೂ ಕೂಡ ಒಬ್ಬ ಪೇಯ್ಡ್ ಸೆಕ್ರೆಟರಿಯನ್ನು ಮಾಡಿ, ಯಾರು ಬರಲ ಯಾರು ಹೋಗಲ ಅವರ ಕೆಲಸಕಾರ್ಯಗಳನ್ನು ದಕ್ಷತೆಯಿಂದ ಮಾಡಿ ರೈತರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿ ಸೊಸೈಟಿಗಳು ಯಾವ ಉದ್ದೇಶಕ್ಕಾಗಿವೆಯೋ ಆ ಉದ್ದೇಶ ಸಾಧನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಆರ್ಬಿಟೇಟರ್ಸ್ ನೇಮಕ ಮಾಡುವಾಗ ಅನೇಕ ರೀತಿ ರಾಜಕೀಯ ನಡೆಯುತ್ತದೆ. ಖಾನಗಿ ಜನರನ್ನು ಆರ್ಬಿಟ್ರೇಟರ್ಸ್ ಆಗಿ ಮಾಡಿ ಅವರೂ ಕೂಡ ಸೊಸೈಟಿಗಳ ರಾಜಕೀಯಲ್ಲಿ ತೊಡಗಿ ಅದರಿಂದಲೂ ಕಲವು ಕಡ್ತಿಗಳು ಬರುತ್ತಿವೆ. ಆದ್ದರಿಂದ ಆರ್ಬಿಟ್ರೇಟರ್ಸ್ ನೇಮಕ ಮಾಡುವಾಗ ಸರಿಯಾದ ಜನರನ್ನು ನೇಮಿಸಬೇಕು. ಖಾನಗಿಯವರನ್ನು ನೇಮಿಸಬೇಕಾದರೂ ಕೂಡ ರಾಗ್ಯಾಜುಯೇಟ್ಸ್ ಇರುವವರನ್ನು ನೇಮಕ ಮಾಡಿ ಅವರಿಗೆ ಉತ್ತೇಜನ ಕೊಡಬೇಕು. ಕಳೆದ ವರ್ಷ ಏನೂ ತಿಳಿಯದೆ ಇರುವ ಜನರನ್ನು, ತಮ್ಮ ಪಕ್ಷಕ್ಕೆ ಸೇರಿದವರನ್ನು ನೇಮಿಸಿ ಅನೇಕ ರೀತಿಯ ರಾಜಕೀಯ ಮಾಡಿ ಈ ಸೊಸೈಟಿಗಳ ವಿಚಾರದಲ್ಲಿ ಗೊಂದಲವನ್ನು ಎಬ್ಬಿಸಿದ್ದಾರೆ.

ಈ ಎಲ್ಲಾ ವಿಚಾರಗಳನ್ನು ತೆಗೆದುಕೊಂಡು ಸೊಸೈಟಿಗಳನ್ನು ಸರಿಯಾಗಿ ನಡೆಸಿ ಆರ್ಥಿಕ ಕ್ರಾಂತಿಯನ್ನು ಉಂಟುಮಾಡಿ, ರೈತನಿಗೆ ಎಲ್ಲಾ ವಿಧದಲ್ಲೂ ಕೂಡ ಒಂದು ಸರ್ವತೋಮುಖವಾದ ಪ್ರಗತಿಯನ್ನು ನಡೆಸಲು ನೆರವನ್ನು ಕೊಡಿಸಬೇಕು. ಇದಕ್ಕಾಗಿ ಹೆಚ್ಚಿನ ಚಳುವಳಿಯನ್ನು ರಾಜ್ಯ ಸರ್ಕಾರ ನಡೆಸಿ ಇದರ ಬಗ್ಗೆ ಹೆಚ್ಚಿನ ಜ್ಞಾನ ಬೆಳೆಯಲು ಅವಕಾಶ ಮಾಡಿ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಸಭಾಧ್ಯಕ್ಷರೇ, ಈ ನದನದ ಮುಂದೆ ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ, ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಲಚ್ಚಿಸುತ್ತೇನೆ. ನಮ್ಮ ದೇಶದಲ್ಲರತಕ್ಕಂಥ ಎಲ್ಲಾ ಅಂದೋಳನಗಳು ಯಾವ ರೀತಿಯಾದ ಹಿತಾಸಕ್ತಿಗಳ ವಶದಲ್ಲಿದ್ದವೋ, ಅದೇ ರೀತಿ, ಸಹಕಾರಿ ಅಂದೋಳನ ಕೆಲವು ಹಿತಾಶಕ್ತಿಗಳ ವಶವಲ್ಲವೆ. ಈ ಅಂಶಗಳನ್ನು ನಾವು ಕಾನೂನಿನಲ್ಲಿಯೂ ನೋಡುತ್ತಿದ್ದೇವೆ. ಕೋ-ಆಪರೇಟೀವ್ ಆಕ್ಟ್ ವೊದಲನಿಂದ ಕೊನೆಯವರಿಗೂ ಹಿತಾಸಕ್ತಿಗಳ ಪರವಾಗಿದ್ದಂಥ ಒಂದು ಕಾನೂನಾಗಿ ಪರಿಣಮಿಸಿರುವುದರಿಂದ, ನಮ್ಮ ರಾಜ್ಯದಲ್ಲಿ ಇಂತಕ್ಕ ಸಹಕಾರ ಸಂಘಗಳು ಸರಿಯಾದ ರೀತಿಯಲ್ಲಿ ಕೆಲಸವಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ಕೋ-ಆಪರೇಟೀವ್ ಸಂಘಗಳಲ್ಲಿ ಇವತ್ತು, ಮುಖ್ಯವಾಗಿ ನಡೆಯಬೇಕಾದುದು, ಚುನಾವಣೆ. ಈ ಚುನಾವಣೆಗಳು ಯಾವ ರೀತಿಯಲ್ಲಿ ನಡೆಯಬೇಕು, ಅದಕ್ಕೆ ವೇಳಾಪಟ್ಟಿ, ಇವುಗಳಿಗೆ ಈ ಕಾನೂನಿನಲ್ಲಿ ಯಾವಅವಕಾಶವೂ ಇಲ್ಲ. ಕೆಲವು ಸಂಧರ್ಭದಲ್ಲಿ ಚುನಾವಣೆ ತಕರಾರುಗಳು ಬಂದಾಗ ಆರ್ಬಿಟ್ರೇಟರ್ಸ್ ಮನಸ್ಸಿಗೆ ಬಂದ ಹಾಗೆ ಅನೇಕ ಸಂದರ್ಭಗಳಲ್ಲಿ ತೀರ್ಪು ಕೊಡುತ್ತಾರೆ ಎಂದು ಎಲ್ಲರ ಗಮನಕ್ಕೆ ಬಂದಿದೆ. ಅದಕ್ಕೆ ಸೂಕ್ತವಾದ ತಿದ್ದುಪಡಿ ತಂದು, ನಿಖರವಾಗಿ ಸಹಕಾರ ಸಂಘಗಳ ಚುನಾವಣೆ ನಡೆಯಬೇಕು ಇಂಥಾ ನಾಮಿನೇಷನ್, ಇಂಥ ದಿವಸ ಸ್ಕ್ರುಟಿನಿ ಫೈನಲ್, ಇಂಥ ದಿವಸ ಪಬ್ಲಿಷ್ ಮಾಡುತ್ತೇವೆ ಎಂದು ಎಲ್ಲಾ ವಿವರ ಇರುವ ಒಂದು ತಿದ್ದುಪಡಿಯನ್ನು ತರಬೇಕು. ಮತ್ತು ಈ ಸಹಕಾರ ಸಂಘಗಳಲ್ಲಿ ಹಣದ ದುರುಪಯೋಗ ಯಥೇಚ್ಛವಾಗಿ ನಡೆಯುತ್ತಿದೆ ಅದಕ್ಕೆ ಕಾರಣ, ಕಾನೂನು ಪ್ರಕಾರ ಯಾರಾದರೂ ಈ ಸೊಸೈಟಿಗಳಲ್ಲಿ ಲಕ್ಷಾಂತರ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಆರು ವರ್ಷವಾದ ಮೇಲೆ ಅದನ್ನು ಲಪಟಾಯಿಸುತ್ತಾರೆ. ಆರು ವರ್ಷದ ಮೇಲೆ ಲಿಮಿಟೇಷನ್ ಇಲ್ಲ. ಮತ್ತು ಅದನ್ನು ಕೇಳತಕ್ಕ ಅಧಿಕಾರ ಕಾನೂನಿನಲ್ಲಿ ಇಲ್ಲ. ಸಾರ್ವಜನಿಕ ಹಣವನ್ನು, ದುರುಪಯೋಗ ಮಾಡಿ ಲೂಟಿ ಮಾಡಿರುವವರಿಗೆ ಕಾಲಮಿತಿಯನ್ನು ಖಂಡಿತವಾಗಿ ಅಳವಡಿಸಿರುವುದು ದುರಾದೃಷ್ಟಕರ. ಆದ್ದರಿಂದ ಈ ಕಾನೂನನ್ನು ತಿದ್ದುಪಡಿ ಮಾಡಬೇಕೆಂದು ಸೂಚಿಸ ತ್ತೇನೆ. ಹಣ ಮಿಸ್‌ಅಪ್ರೋಪ್ರಿಯೇಷನ್ ಆಗಿರತಕ್ಕದ್ದು ಎಲ್ಲರಿಗೂ ಗೊತ್ತಿದೆ. ನನಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗದೆ ಇರುವ ಸಹಕಾರ ಸಂಘಗಳು ಇರಬೇಕೋ ಎಂದು ಪೂರ್ಣ ಅನುಮಾನ ಇದೆ. ಸಣ್ಣ ಸಹಕಾರ ಸಂಘಗಳಿಂದ ಹಿಡಿದು, ದೊಡ್ಡ ಸಹಕಾರ ಸಂಘಗಳವರೆಗೆ ಎಲ್ಲದರಲ್ಲೂ ಡೈರೆಕ್ಟರ್ ಆಗಿ ಅಧ್ಯಕ್ಷನಾಗಿದ್ದೇನೆ. ನಾನು ಡೈರೆಕ್ಟರ್ ಆಗಿರತಕ್ಕಂಥ ಕೋರಾರ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಗೌರಿಬಿದನೂರು ಬ್ರಾಂಚ್‌ನಲ್ಲಿ 1,20,000 ರೂಪಾಯಿ ಮಿಸ್ ಅಪ್ರೋಪ್ರಿಯೇಷನ್ ಆಯ್ತು. ಕಾನೂನು ರೀತಿ ಕ್ರಮ ತೆಗೆದುಕೊಳ್ಳಲು ಪೋಲಿಸಿನವರಿಗೆ ತಿಳಿಸಿದರೆ, ಇದುವರಗೂ ಯಾವ ಕ್ರಮ ವನ್ನೂ ತೆಗೆದುಕೊಂಡಿಲ್ಲ. ಇವತ್ತಿನ ದಿವಸ ಮಿಸ್ ಅಪ್ರೋಪ್ರಿಯೇಷನ್ ಮಾಡಿರುವವರು ನಮ್ಮ ಎದುರಿಗೆ ಮೀಸೆ ತಿರುಗಿಸಿಕೊಂಡು ಓಡಾಡುತ್ತಿದ್ದಾರೆ. ಮಾನ್ಯರು ಪೋಲೀಸರಿಗೆ ಇದನ್ನು

(ಶ್ರೀ ಸಿ. ಬೈರೇಗೌಡ)

ಒಪ್ಪಿಸಿದರೆ, ಅವರು ಮಾಮೂಲು ತೆಗೆದುಕೊಳ್ಳುವುದು, ಹಣ ದುರುಪಯೋಗ ಪಡಿಸುವುದು ಇನ್ನೂ ಹೆಚ್ಚಾಗುತ್ತದೆ. ಮತ್ತು ಮಿಸ್ ಅಪ್ರೊಪ್ರಿಯೇಟ್ ಮಾಡುವುದಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಇದನ್ನು ತಪ್ಪಿಸಿ, ಪೋಲೀಸ್ ಇಲಾಖೆಯಲ್ಲಿ, ಬೇರೆ ವ್ಯವಸ್ಥೆ ಅಂದರೆ ಸ್ಪೆಷಲ್ ಬ್ರಾಂಚ್ ಮಾಡಿ ಈ ಮಿಸ್ ಅಪ್ರೊಪ್ರಿಯೇಷನ್ ಆಗಿರುವ ಕೇಸುಗಳನ್ನು ಅವರಿಗೆ ರಿಫರ್ ಮಾಡಿ ಅವರನ್ನು ಕಾನೂನಿಗೆ ಒಳಪಡಿಸಬೇಕು ಎಂದು ಹೇಳುತ್ತಿದ್ದೇನೆ. ಕೆಲವು ಕೇಸುಗಳನ್ನು ಕೋರ್ಟಿಗೆ ಹಾಕಿದ್ದಾರೆ. 50 - 000 ರೂಪಾಯಿ ಮಿಸ್ ಅಪ್ರೊಪ್ರಿಯೇಟ್ ಆಗಿರುವ ಕೇಸುಗಳು ಮಾತ್ರ ಕೋರ್ಟಿನ ಎದುರಿನಲ್ಲಿವೆ. ಲಕ್ಷಾಂತರ ರೂಪಾಯಿ ದುರುಪಯೋಗಪಡಿಸಿದ ಕೇಸುಗಳು ಒಂದೂ ಇವರ ಕಣ್ಣಿಗೆ ಕಾಣುತ್ತಾ ಇಲ್ಲ. ಏತಕ್ಕೆ ಈ ತಾರತಮ್ಯ, ಅನ್ಯಾಯ ಎಂದು ಕೇಳಬಯಸುತ್ತೇನೆ. ಇರಾಖೆಯಲ್ಲಿರುವ ದೊಡ್ಡ ಮಾನುಗಳನ್ನು ಹಿಡಿಯುವುದಕ್ಕೆ ಪ್ರಯತ್ನಪಡಿ, ಸಣ್ಣ ಸಣ್ಣ ಮೀನುಗಳು ತಾನಾಗಿ ಸಿಕ್ಕುತ್ತವೆ. ದೊಡ್ಡವರನ್ನು ಶಿಕ್ಷಿಸಿದರೆ, ಚಿಕ್ಕವರು ಬುದ್ಧಿ ಕಲಿತುಕೊಳ್ಳುತ್ತಾರೆ. ಲಕ್ಷಾಂತರ ರೂಪಾಯಿ ಮಿಸ್ ಅಪ್ರೊಪ್ರಿಯೇಷನ್ ಮಾಡಿರುವವರನ್ನು ಕಾನೂನಿಗೆ ಒಳಪಡಿಸಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಎನ್. ಪಾಟೀಲ್ (ಲಿಂಗಸುಗೂರು).—ಮಾನ್ಯ ಅಧ್ಯಕ್ಷರೇ, ನನ್ನ ಎರಡನೆಯ ಕೋ-ಆಪರೇಟೀವ್ ಮೂವ್‌ಮೆಂಟ್ ಬಗ್ಗೆ ಮಾತನಾಡಿದ್ದು ಆಗಿದೆ. ಎಷ್ಟೋ ಜನರು ಹೇಳಿದ ದೋಷ ಮತ್ತು ಆರೋಪಣೆಗಳನ್ನು ಕೇಳಿದೆವು. ಕೋ-ಆಪರೇಟೀವ್ ಆಕ್ಟನ್ನು ಹೇಗೆ ತಿದ್ದುಪಡಿ ಮಾಡಬೇಕು ಮತ್ತು ಅದರಲ್ಲಿರುವ ದೋಷಗಳು ಯಾವ ಯಾವುವು ಎನ್ನುವುದರ ಬಗ್ಗೆ ಕೆಲವು ಮಾತುಗಳನ್ನು ಮಾತ್ರ ಹೇಳುತ್ತೇನೆ. ಕೋ-ಆಪರೇಟೀವ್ ಮೂವ್‌ಮೆಂಟ್‌ನಲ್ಲಿರುವ ಮುಖ್ಯ ದೋಷ ಏನೆಂದರೆ, ಯಾರ ಯಾರ ಹೆಸರನ್ನಲ್ಲಿ ಸಾಲ ವಂಸೂರು ಆಗುತ್ತದೋ ಅಂಥವರಿಗೆ ಮಂಜೂರು ಆದ ಸಾಲ ಮುಟ್ಟದೇ ಹೋಗುತ್ತದೆ. ಕಲ್ಲಪ್ಪನಿಗೆ ಮಂಜೂರು ಆದರೆ ಮಲ್ಲಪ್ಪ ಹೆಬ್ಬೆಟ್ಟು ಒತ್ತಿ ಸಾಲ ತೆಗೆದುಕೊಳ್ಳುತ್ತಾನೆ. ಇದರ ಎನ್‌ಕ್ವೈರಿ ಆಗುವುದಿಲ್ಲ. ಇದನ್ನು ತಾವು ನಡೆಯದಂತೆ ನೋಡಿಕೊಳ್ಳಬೇಕು. ಎರಡನೆಯದು ಈ ಸೊಸೈಟಿಗಳಲ್ಲಿ ಪರ್ಫೆಕ್ಟ್ ಆಗಿ ಅಕೌಂಟ್ಸ್ ಮೇಂಟೇನ್ ಮಾಡುವುದಿಲ್ಲ. ಲೋನ್ ಡಿಸ್‌ಬರ್ಸ್‌ಮೆಂಟ್ ರಿಜಿಸ್ಟರ್‌ನಲ್ಲಿ ಪ್ರಾಪರ್ ಸಿಗ್ನೇಚರ್ ಮಾಡಿರುವುದಿಲ್ಲ. ಅಕೌಂಟ್ಸ್ ಸರಿಯಾಗಿ ಚೆಕ್ ಮಾಡುವುದಕ್ಕೆ ಕೆಲವು ರಿಜಿಸ್ಟರುಗಳೇ ಇಲ್ಲದೆ ಹೋಗುತ್ತವೆ. ಆಡಿಟ್ ಆಗಿರುವುದಿಲ್ಲ. 3--4 ವರ್ಷ ಅಕೌಂಟ್ಸ್ ಬರೆಯದೆ ಇರುವುದರಿಂದ ಮಿಸ್ ಅಪ್ರೊಪ್ರಿಯೇಷನ್ ಆಗುವುದಕ್ಕೆ ಹೆಚ್ಚು ಸ್ಕೋಪ್ ಇರುತ್ತದೆ. ಕಾಯಿದೆ ಪ್ರಕಾರ ಜನರಲ್ ಬಾಡಿ ಮೀಟಿಂಗ್ ಆಗುವುದಿಲ್ಲ. ಈ ರೀತಿ ನಾನು ಏನು ಏನು ನಲಹೆಗಳನ್ನು ಹೇಳಿದೆ, ಅದರ ಪ್ರಕಾರ ಸರಿಯಾಗಿ ನಡೆಸಿಕೊಂಡರೆ, ಕೋ ಆಪರೇಟೀವ್ ಮೂವ್‌ಮೆಂಟ್ ನಮ್ಮ ದೇಶದಲ್ಲಿ ಸಕ್ಸಸ್ ಆಗುತ್ತದೆ. ಇಲ್ಲದಿದ್ದರೆ ಈ ಸೊಸೈಟಿಗಳು ಮುಳುಗಿ ಹೋಗುತ್ತವೆ. ಅನುಕೂಲತೆ ಕಲ್ಪಿಸುವಕ್ಕೆ ಮಾಡಿಯೂ ಇಲ್ಲದೆ ಸರ್ಕಾರ ಕೊಟ್ಟ ದುಡ್ಡು ಹಾಳಾಗಿ ಹೋಗುತ್ತದೆ. ಸಹಕಾರಿ ಚಳುವಳಿಯಲ್ಲಿ ಜನರು ನಂಬಿಕೆ ಕಳೆದುಕೊಳ್ಳುತ್ತಾರೆ, ಹೀಗೆ ಜನರು ನಂಬಿಕೆ ಕಳೆದುಕೊಂಡರೆ ಇದನ್ನು ಸುಧಾರಿಸುವುದು ಹೇಗೆ? ನನ್ನ ಅಭಿಪ್ರಾಯದಲ್ಲಿ ಆರ್ಬಿಟ್ರೇಟರ್ಸ್ ಪದ್ಧತಿ ಏನು ಇದೆ ಅದನ್ನು ರದ್ದು ಮಾಡಿ ಅಲ್ಲಿ ಆಗುವ ತಪ್ಪುಗಳನ್ನು ಸಿವಿಲ್ ಕೋರ್ಟಿಗೆ ಒಪ್ಪಿಸಬೇಕು. ಜನರಲ್ ಬಾಡಿ ಮೀಟಿಂಗ್ ಕರೆಯುವುದರಲ್ಲಿ ತಪ್ಪು ಮಾಡಿದರೆ, ಲೋನ್ ಡಿಸ್‌ಬರ್ಸ್‌ಮೆಂಟ್ ಮಾಡುವುದರಲ್ಲಿ ತಪ್ಪು ಮಾಡಿದರೆ ಪರ್ಫೆಕ್ಟ್ ಅಕೌಂಟ್ ಇಡದೆ ಹೋದಲ್ಲಿ, ಆಡಿಟ್ ಮಾಡದೇ ಹೋದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮಿಸ್ ಅಪ್ರೊಪ್ರಿಯೇಷನ್ ಆಗಿರತಕ್ಕ ಕೇಸುಗಳನ್ನು ಸಿವಿಲ್ ಕೋರ್ಟಿಗೆ ಒಳಪಡಿಸಿ ಇಂಡಿಯನ್ ಪೀನಲ್ ಕೋಡಿಗೆ ಅಪರಾಧಿಯನ್ನು ಒಳಪಡಿಸಿ ಹೆಚ್ಚು ಭಯ ಹುಟ್ಟುವಂತೆ ಮಾಡಿದರೆ, ಈ ತರಹ ತಪ್ಪುಗಳು ಕಡಿಮೆಯಾಗುತ್ತವೆ, ಡಿಸ್ಟೇ ಇನ್ ಅಕ್ಷನ್ ಕಡಿಮೆಯಾಗಿ ಕೋ-ಆಪರೇಟೀವ್ ಮೂವ್‌ಮೆಂಟ್ ಸುಧಾರಿಸಬಹುದು. ಇನ್ನೊಂದು ಆರು ವರ್ಷದ ಲಿಮಿಟೇಷನ್ ತೆಗೆದುಹಾಕಬೇಕು. ಇಲ್ಲದಿದ್ದರೆ ಕಾನೂನು ಪ್ರಕಾರ ಅವನಿಂದ ಸಾಲ ರಿಕವರ್ ಮಾಡುವುದಕ್ಕೆ ಅಧಿಕಾರ ಉಳಿಯುವುದಿಲ್ಲ; ಸೆಕ್ಯುರಿಟಿಯೂ ಉಳಿಯುವುದಿಲ್ಲ. ಆರು ವರ್ಷ ಸಾಲ ಕೊಡುವುದನ್ನು ತಪ್ಪಿಸಿಕೊಂಡರೆ, 7ನೇ ವರ್ಷದಿಂದ ನಿರಪರಾಧಿ ಆಗಿ ಹಣವನ್ನು ಕೊಡದೆ ತಪ್ಪಿಸಿಕೊಳ್ಳುತ್ತಾನೆ. ಅದಕ್ಕೋಸ್ಕರ ಈ ಆರು ವರ್ಷದ ಲಿಮಿಟೇಷನ್ ತೆಗೆದುಹಾಕಬೇಕು. ಲ್ಯಾಂಡ್ ಡೆವೆಲಪ್‌ಮೆಂಟ್ ಬ್ಯಾಂಕ್ ಲೋನ್ ಕೋ ಆಪರೇಟೀವ್ ಸೊಸೈಟಿಗಳ ಲೋನ್ ಅರಿಯರ್ಸ್ ಏನಿವೆ ಅವನ್ನು, they must be recovered as land revenue arrears ಎಂದು ಇದೆ. ಅದು ಸ್ಟೋ ಸಿಸ್ಟಮ್ ಅದರ ಪ್ರಕಾರ ರಿಕವರ್ ಮಾಡಲಿಕ್ಕೆ ಹೆಚ್ಚಿಗೆ ಪವರ್ಸ್ ಇವಿನ್ಯೂ

ಆಫೀಸರ್ಸ್‌ಗೆ ಇರುತ್ತದೆ. ರೆವೆನ್ಯೂ ಆಫಿಸರ್ಸ್‌ಗೆ ಪವರ್ಸ್ ಕೊಟ್ಟರೆ ರಿಕವರ್ ಮಾಡುವುದು ತಡವಾಗುತ್ತದೆ. ಆದ್ದರಿಂದ ನನ್ನ ಸಲಹೆ ಏನು ಎಂದರೆ ಇದನ್ನು ಲ್ಯಾಂಡ್ ರೆವಿನ್ಯೂ ಆಫಿಸರ್ಸ್ ಎನ್ನುವುದಕ್ಕೆ ಬದಲಾಗಿ ಇನ್‌ಕಮ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ಆಫಿಸರ್ಸ್‌ನಂತೆ ಕೋ-ಆಪರೇಟಿವ್ ಮೂವ್‌ಮೆಂಟ್ ಆಫೀಸರ್ಸ್ ಕೊಡುವುದು ಇದ್ದರೆ ಕೋ-ಆಪರೇಟಿವ್ ಮೂವ್‌ಮೆಂಟ್ ಗೆ ಹೋಗಿ ಜನಾ ಮಾಡುವ ಪದ್ಧತಿಯನ್ನು ಅನುಸರಿಸುವ ರೀತಿ ಮಾಡಬೇಕು. ನಾನು ಕೊಟ್ಟಿರುವ 5—6 ಸಲಹೆಗಳನ್ನು ಇಂಪ್ಲಿಮೆಂಟ್ ಮಾಡಿದರೆ ಕೋ-ಆಪರೇಟಿವ್ ಮೂವ್‌ಮೆಂಟ್ ಉಳಿಯುತ್ತದೆ. ಇಲ್ಲದಿದ್ದರೆ ಕೋ-ಆಪರೇಟಿವ್ ಮೂವ್‌ಮೆಂಟ್ ಉಳಿಯುವುದಿಲ್ಲ. ಕೋ-ಆಪರೇಟಿವ್ ಮೂವ್‌ಮೆಂಟ್ ಒಟ್ಟಿಲು ಬೋರಿಯಾಗಿ ಪರಿಣಮಿಸಿದೆ. ಇದನ್ನು ಕ್ಲೀನ್ ಮಾಡದೆ ಹಾಗೆ ಇಟ್ಟರೆ ಜೋಕ್ ಆಗುತ್ತದೆ. ಇದು ಜೋಕ್ ಆಗದೆ ಇರುವ ಹಾಗೆ ನೋಡಬೇಕು ಇದರಲ್ಲಿ ಕಳ್ಳರು ಇದ್ದಾರೆ ಮತ್ತು ಸದ್ಗೃಹಸ್ಥರು ಇದ್ದಾರೆ. ಆದುದರಿಂದ ಪಾರ್ಟಿಮೇಲೆ ಹೊಗಕೂಡದು. ಕೋ ಆಪರೇಟಿವ್ ಮೂವ್‌ಮೆಂಟ್ ಪಾರ್ಟಿ ಆಧಾರದ ಮೇಲೆ ಹೋಗದೆ ಅವನು ಇಂಡಿಯನ್ ಎಂದು ತಿಳಿದುಕೊಂಡು ಸರಿಯಾಗಿ ನೋಡಿದರೆ ನಮ್ಮ ದೇಶ ಉಳಿಯುತ್ತದೆ. ಈ ರೆಸೊಲ್ಯೂಷನ್‌ಗೆ ಬೆಂಬಲ ಕೊಟ್ಟು ನನ್ನ ನಾಲ್ಕು ಮಾತು ಮುಗಿಸುತ್ತೇನೆ

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಈ ಠರಾವನ್ನು ಸ್ವಾಗತಿಸುತ್ತಾ ಕೆಲವು ಸಲಹೆ ಕೊಡುತ್ತೇನೆ. ಕೋ-ಆಪರೇಟಿವ್ ಸೊಸೈಟಿಗಳು ಅಧೋಗತಿಗೆ ಬರಲಿಕ್ಕೆ ಕಾರಣ ಸರ್ಕಾರದವರು. ಯಾವ ಸರ್ಕಾರವೇ ಇರಲಿ ಅವರ ಅಭಿಪ್ರಾಯ ಅಡಳಿತ ನಡೆಸಕ್ಕವರು ಅವರ ಪಕ್ಷದವರು ಆಗಬೇಕು, ಅವರ ಪಕ್ಷದವರು ಚುನಾವಣೆಯಲ್ಲಿ ಗೆಲ್ಲಬೇಕು, ಅವಕ್ಕೆ ಏನೇನು ಕಾರ್ಯಕ್ರಮ ಮಾಡಬೇಕು ಅದನ್ನು ಮಾಡುತ್ತಾರೆ. ಇನ್ನು ಡೈರೆಕ್ಟರ್ಸ್‌ಗಳು ಅಡಳಿತ ವರ್ಗದವರು ತಮ್ಮ ಕ್ಷೇತ್ರಗಳಲ್ಲಿ ಅವರ ಪಕ್ಷದ ಜನರಿಗೆ ಸಹಾಯ ಮಾಡಲಿಕ್ಕೆ ಎಂದು ಒಂದು ಉದ್ದೇಶ ಇದೆಯೇ ವಿನಹ ಎಲ್ಲರಿಗೂ ಸಹಾಯವಾಗಲಿ ಎನ್ನುವ ಉದ್ದೇಶವಿಲ್ಲ. ಆದುದರಿಂದ ಸೊಸೈಟಿಗಳು ಅಧೋಗತಿಗೆ ಬಂದಿವೆ. ಇದಕ್ಕೆ ಸರ್ಕಾರವೇ ಕಾರಣವೆಂದು ಘಂಟಾಘೋಷವಾಗಿ ಕೂಗಿ ಹೇಳುತ್ತೇನೆ. ಶ್ರೀಮಾನ್ ಕರಿಯಪ್ಪನವರು ಅವರ ಅನುಭವದಲ್ಲಿ ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಇನ್ನು ಮುಂದೆ ಪ್ರಾಮಾಣಿಕರು, ದಕ್ಷರು ಅಡಳಿತ ವಹಿಸಿಕೊಂಡು ಸೊಸೈಟಿಗಳ ಅಡಳಿತವನ್ನು ನಡೆಸಲು ನಿಮ್ಮ ಪಕ್ಷದಲ್ಲಿ ಇರಲಿ ಯಾವ ಪಕ್ಷದಲ್ಲಿ ಇರಲಿ ಎನ್ನುವ ಮನೋಭಾವನೆ ತೊರೆದು ಸಹಕಾರ ಸಂಘಗಳು ಒಳ್ಳೆಯ ಅಡಳಿತ ನಡೆಸಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಸಜ್ಜನ್ (ಮುನಿರಾಬಾದ್).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಕರಿಯಪ್ಪನವರು ತಂದಿರುವ ನಿರ್ಣಯಕ್ಕೆ ಬೆಂಬಲ ಕೊಡುತ್ತಾ ಕೇವಲ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಕೋ-ಆಪರೇಟಿವ್ ಸೊಸೈಟಿ ಜನರಿಗೆ ಬದಲಾಗಿ ಮಿಸ್ ಅಪ್ರೊಪ್ರಿಯೇಷನ್ ಆಫ್ ಪಬ್ಲಿಕ್ ಸೊಸೈಟಿ ಎನ್ನುವಂತೆ ಆಗಿದೆ. ಆ ಅನುಭವ ನಮಗೆ ಬಂದಿದೆ. ಭೀಭತ್ಸ ಪರಿಸ್ಥಿತಿ ಸಹಕಾರಿ ಸಂಘಗಳಲ್ಲಿ ಉಂಟಾಗಿದೆಯೆಂದು ಸಭೆಯ ಗಮನಕ್ಕೆ ತರುತ್ತೇನೆ. ಇಲ್ಲಿ ನಡೆಯುತಕ್ಕ ಗುತ್ತೇದಾರಿ ಮನೋಭಾವ ಹೋಗಬೇಕು. ಕೇವಲ ಕೆಲವು ಗುಂಪಿನ ಸ್ವತ್ತು ಆಗಿ ಕಲವೇ ಪಾರ್ಟಿ ಜನ ಸ್ವತ್ತು ಆಗಿ ಸಹಕಾರಿ ಸಂಘಗಳು ನಡೆಯುತ್ತಿವೆ. ಅವನ್ನು ತಪ್ಪಿಸಿ ಮಾಡಿ ಪರಿಸ್ಥಿತಿ ನಡೆಯುವಂತೆ ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಆ ನಡೆಯುವುದು ಕೋಷ್ಠಿಂ. ಪ್ರತಿವರ್ಷ ಕಡ್ಡಾಯವಾಗಿ ಕಡ್ಡಾಯವೆಂದು ಸಾಧಾರಣ ವಾರ್ಷಿಕ ಸಭೆಗಳನ್ನು ಕರೆಯುವುದಿಲ್ಲ. ಅದಕ್ಕೆ ಸಂಬಂಧಪಟ್ಟ ನಿಯಮಗಳನ್ನು ಪಾಲಿಸುವುದಿಲ್ಲ. ಹೀಗಾಗಿ ಸೊಸೈಟಿಗಳಲ್ಲಿ 10–15 ವರ್ಷಗಳ ಹಿಂದೆ ಯಾವ ಕಾರ್ಯನಿರ್ವಾಹಕ ಮಂಡಲಿಗಳು ಸ್ಥಾಪಿಸಲ್ಪಟ್ಟವೋ ಅದೇ ಕಾರ್ಯನಿರ್ವಾಹಕ ಮಂಡಲಿಗಳು ಇವೊತ್ತಿಗೂ ನಡೆಯುತ್ತಾ ಬಂದಿದೆ. ಹೀಗಾಗಿ ಹಂತೆ ನೋಡಿ ಆಳಬೇಕಾದರೆ ಸರ್ಕಾರದವರು ವಾರ್ಷಿಕ ಸರ್ವಸಾಧಾರಣ ಸಭೆಗಳನ್ನು ಕರೆಯುವಂತೆ ಮಾಡಬೇಕು. ಕೆಲವೊಂದು ಸೊಸೈಟಿಗಳಲ್ಲಿ ಚೇರಮನ್ ಬದಲು ಆದರೂ ಕೂಡ ತಮ್ಮ ಚಾರ್ಜನ್ನು ಬದಲಾವಣೆ ಕೊಡುವ ಪರಿಪಾಟವಿಲ್ಲ. ಇದನ್ನು ತಪ್ಪಿಸುವ ಸಲುವಾಗಿ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಎಂಥ ಹೇಳಿಯ ಚೇರಮನ್‌ನಿಂದ ಸೊಸೈಟಿಗೆ ಹೊಸ ಚಾರ್ಜ ಮನೆಗೆ ಅಡಳಿತ ನೂತನವನು ಕೊಡುವ ಏರ್ಪಾಡು ಮಾಡಬೇಕು ಇನ್ನು ಸೊಸೈಟಿಗಳಲ್ಲಿ ಬರವೈತರಿಗೆ ಹಂಚತಕ್ಕ ಬೀಜ ವ್ಯವಸಾಯ ಉಪಕರಣಗಳು ಸಮರ್ಪಕ ರೀತಿಯಲ್ಲಿ ಸಿಕ್ಕುತ್ತಿಲ್ಲ. ಈ ಗುತ್ತೇದಾರಿ ರೀತಿ ಸೊಸೈಟಿ ನಡೆಯುತ್ತಿರುತ್ತದೆ. ಸಂಬಂಧಪಟ್ಟ ಹುದ್ದೆಗಳು ದುರುಪಯೋಗಪಡಿಸಿಕೊಳ್ಳುತ್ತಾರೆ ಎನ್ನುವುದನ್ನು ನನ್ನ ಅನುಭವದಿಂದ ಹೇಳುತ್ತೇನೆ. ಆದ್ದರಿಂದ ಸರಿಯಾಗಿ ಏನಿಯೋಗ ಆಗಬೇಕಾದರೆ ಸೊಸೈಟಿ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಹೆಚ್ಚಬೇಕು. ಮಾನ್ಯ ಸಭಾಪತಿಗಳು ಎರಡು ನಿಮಿಷ ಅವಕಾಶ ಕೊಟ್ಟರು. ಅದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಈ ಠರಾವಿನ ಬಗ್ಗೆ ಒಂದು ಸಲಹೆಯನ್ನು ಮಾನ್ಯ ಸಭೆಗೆ ಹೇಳಬಯಸುತ್ತೇನೆ. ರೈತರ ಶ್ರೇಯೋಭಿವೃದ್ಧಿಗೆ ಇರುವ ಸಹಕಾರಿಸಂಘಗಳಿಂದ ಅನುಕೂಲದ ಬದಲಿಗೆ ಅನಾನುಕೂಲಗಳು ನಡೆಯುತ್ತಿವೆ. ರೈತರು ಸಾಲವನ್ನು ವಾಪಸು ಕೊಟ್ಟರೂ ಅಂಥವರ ಬಗ್ಗೆ ಕರುಕುಳ ಜಾಸ್ತಿಯಾಗುತ್ತಿದೆ ಹೇಗೆ ಎಂದರೆ ಸಹಕಾರಿ ಸಂಘಗಳಲ್ಲಿ ಇರುವ ಸೆಕ್ರೆಟರಿ ಮತ್ತು ಪ್ರೆಸಿಡೆಂಟ್‌ಗಳು ದುರಾಶೆಗೆ ಒಳಗಾಗಿ ತಿಳುವಳಿಕೆ ಇಲ್ಲದ ರೈತರಿಂದ ಹಣವನ್ನು ಪಡೆದು ಡೂಪ್ಲಿಕೇಟ್ ರಸೀದಿ ಕೊಡುವರು. ಡೂಪ್ಲಿಕೇಟ್ ರಸೀದಿಯಲ್ಲಿ ತಾರೀಖು ಹಾಕದ ರುಜು ಹಾಕದೆ ಕೊಟ್ಟಿರುತ್ತಾರೆ. ಒಂದೆರಡು ವರ್ಷಗಳನಂತರ ದಾವಾ ಡಿಕ್ರಿ ಮಾಡಿ ಹೊಲ ಹರಾಜು ಹಾಕುವ ಸಂದರ್ಭವಿದೆ. ಈ ದೃಷ್ಟಿಯಿಂದ ಈ ಪ್ರಶ್ನೆಯನ್ನು ಕೇಳುತ್ತೇನೆ. ಕೆಲವು ಸಂದರ್ಭಗಳಲ್ಲಿ ಇರಾಖುಯವರು ಕೂಡಾ ಇಂಥ ಅವಿವೇಕ ದುರ್ವ್ಯವಹಾರದಲ್ಲಿ ಒಳಗಾಗಿದ್ದಾರೆ ಎಂದು ನನಗೆ ವರ್ತಮಾನ ಬಂದಿದೆ. ಹೇಗೆ ಎಂದರೆ ಡೂಪ್ಲಿಕೇಟ್ ರಸೀದಿ ಕೊಡುವುದು ಈ ರೀತಿಮಾಡತಕ್ಕ ಪ್ರೆಸಿಡೆಂಟ್ ಮತ್ತು ಸೆಕ್ರೆಟರಿ ಇವರ ಮೇಲೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಸರಪಾದಿ ರೈತರಮೇಲೆ ದಾವಾ ಡಿಕ್ರಿ ಮಾಡಿ ಜಪ್ತಿನು ಹರಾಜು ಮಾಡುವುದು ಸರಿಯಲ್ಲ. ಇಂತಹ ನೂರಾರು ಉದಾಹರಣೆಗಳು ಹಾಸನ್ ಡಿಸ್ಟ್ರಿಕ್ಟ್‌ನಲ್ಲಿ ಇವೆ. ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ ಹಾಸನದಲ್ಲಿ ಬಳಿಗೆರೆ ಸೊಸೈಟಿ ಶಾಂತಿಗ್ರಾಮ ಸೊಸೈಟಿಗಳಲ್ಲಿ ಈ ರೀತಿ ನಡೆದಿದೆ. ಜನಗಳಿಂದ ದುಡ್ಡು ತೆಗೆದುಕೊಂಡು ಮೋಸಮಾಡಿದ್ದಾರೆ. ಪ್ರೆಸಿಡೆಂಟ್ ಮತ್ತು ಸೆಕ್ರೆಟರಿ ಅವರಿಂದ ಹಣವನ್ನು ವಸೂಲುಮಾಡಬೇಕು, ದುಡ್ಡು ಕೊಟ್ಟು ಆ ತಿಳುವಳಿಕೆ ಇಲ್ಲದ ರೈತರ ಮೇಲೆ ಯಾವ ಕಾರ್ಯಕ್ರಮ ತೆಗೆದುಕೊಳ್ಳಬಾರದು ಎಂದು ಹೇಳುತ್ತೇನೆ.

5-00 P.M.

†ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಸಹಕಾರ ಕ್ಷೇತ್ರದಲ್ಲಿ ನಾನು ಆರ್ಬಿಟ್ರೇಟರ್ ಆಗಿ ಹತ್ತು ವರ್ಷಗಳ ಕಾಲ ಕೆಲಸ ಮಾಡಿದ ಅನುಭವದಿಂದ ಇಲ್ಲಿ ಕೆಲವು ವಿಚಾರಗಳನ್ನು ಸರಕಾರದ ಗಮನಕ್ಕೆ ತರಬೇಕಾಗಿದೆ. ಮತ್ತು ನಾನು ಸಹಕಾರ ಸಂಘದಲ್ಲಿ ಡೈರೆಕ್ಟರು ಆಗಿಯೂ ಕೆಲಸಮಾಡಿದ್ದೇನೆ. ಆರ್ಬಿಟ್ರೇಟರುಗಳು ಕೆಲವು ಕೇಸುಗಳಲ್ಲಿ ನೋಟೀಸನ್ನು ರಿಜಿಸ್ಟರು ಪೂಲಕ ಕಳುಹಿಸಿದರೂ ಅದನ್ನು ಜಾರಿ ಮಾಡುವುದೇ ಕಷ್ಟವಾಗಿದೆ. ಏಕಂದರೆ ಪಾರ್ಟಿಗಳು ಪೋಸ್ಟ್ ಆಫೀಸಿನಲ್ಲಿ ಪೋಸ್ಟ್‌ಮ್ಯಾನನ್ನು ನಿರೀಮಾಡಿಕೊಂಡು ನೋಟೀಸು ಬಂದಾಗ ಅವರು ಊರಿನಲ್ಲಿ ಇಲ್ಲವೆಂದೋ ಅಥವಾ ಬೇರೆ ಏನಾದರೂ ನಬೂಬು ಬರಿಸಿ ನೋಟೀಸುಗಳು ಜಾರಿಯಾಗದೇ ಇರುವಂತೆ ಮಾಡುತ್ತಾರೆ. ಅವು ವಾಪಸು ಬರುತ್ತಿವೆ. ಎಪಿಡೆನ್ಸ್ ಆಕ್ಟ್ 110 ನೇ ಸೆಕ್ಷನ್ ಪ್ರಕಾರ ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್ ಕಳುಹಿಸಿದರೂ ಸಾಕು ಎಂದು ಇದೆ. ಇದರಲ್ಲಿರುವ ನ್ಯೂನತೆಗಳನ್ನು ಸರಕಾರ ಸರಿಪಡಿಸಬೇಕು. ಇನ್ನೊಂದು ಇದರಲ್ಲಿರುವ ನ್ಯೂನತೆ ಎಂದರೆ ವಸೂಲಾತಿ ಕೇಸುಗಳಲ್ಲಿ ಆರ್ಬಿಟ್ರೇಟರು ಕೇಸನ್ನು ಡಿಸ್‌ಪೋಸ್ ಮಾಡುವಾಗ ಕೆಲವುವೇಳೆ ಆರ್ಬಿಟ್ರೇಟರು ಸ್ಟೇ ಕೊಡಲು ಅಧಿಕಾರ ಇಲ್ಲ. ಸ್ಟೇ ಆರ್ಡರು ಪಡೆಯಬೇಕಾದರೆ ಬೆಂಗಳೂರಿಗೇ ಬಂದು ತೆಗೆದುಕೊಳ್ಳಬೇಕಾಗಿದೆ. ಇದನ್ನು ತಪ್ಪಿಸಬೇಕು. ಆರ್ಬಿಟ್ರೇಟರೇ ಆಯಾ ಸ್ಥಳದಲ್ಲಿ ಸ್ಟೇ ಆರ್ಡರು ಕೊಡುವ ಅಧಿಕಾರ ಕೊಡಬೇಕು, ಮತ್ತು ಇನ್ನೊಂದು ತೊಂದರೆ ಆರ್ಬಿಟ್ರೇಟರ್ ಡಿಕ್ರಿ ಕೊಡುವಾಗ ಕೆಲವು ಪಾರ್ಟಿಗಳು ಅವರ ಹಣವನ್ನು ಆರು ತಿಂಗಳಲ್ಲಿ ಕೊಡುತ್ತೇವೆ ಎಂದು ಕಾಲಾವಕಾಶವನ್ನು ಕೇಳುತ್ತಾರೆ. ಆದರೆ ಆರ್ಬಿಟ್ರೇಟರಿಗೆ ಕಾಲಾವಕಾಶ ಕೊಡುವ ಅಧಿಕಾರ ಇಲ್ಲ, ಆದುದರಿಂದ ಆರ್ಬಿಟ್ರೇಟರು ಡಿಕ್ರಿ ಆರ್ಡರು ಪಾಸು ಮಾಡಿದ ಮೇಲೆ ಕೆಲವು ಸಂದರ್ಭಗಳಲ್ಲಿ ಪಾರ್ಟಿಗಳಿಗೆ ಕಾಲಾವಕಾಶ ನೀಡುವ ಅಧಿಕಾರ ಕೊಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ಎಚ್. ಜಗನ್ನಾಥ ನಾರಾಯಣ್ (ಸಿರ್ಸಿ). ನನಗೆ ಮೊದಲು ಪಾಯಿಂಟ್ ಆಫ್ ಆರ್ಡರು ಇದೆ. ಪ್ರೈಮರಿ ಟು ಮೆಂಬರ್ಸ್ ವರೆಗೂ (ಪಬ್ಲಿಕ್ ಅಕೌಂಟ್ಸ್ ಕಮಿಟಿ ಯವರು ಒಂದೊಂದು ನಿರ್ಣಯಕ್ಕೂ ಕಾಲವನ್ನು ನಿಗದಿ ಮಾಡಿದ್ದಾರೆ. ಅವರಿತೆ ಇಂಥ ಈ ನಿರ್ಣಯಕ್ಕೆ ಒಂದೂವರೆ ಗಂಟೆಗಳ ಕಾಲ ಆ ಕಡೆ ವಿದ್ದರೂ ಇದನ್ನು ನಾನೂ ಮುಂದುವರಿಸಿ ಕೊಂಡು ಹೋದರೆ ಇತರ ಮುಖ್ಯ ವಾದ ನಿರ್ಣಯಗಳನ್ನು ಇತ್ತೆಗೆದುಕೊಳ್ಳಲು ಒರುವುದಿಲ್ಲ. ನಾವು 18 ಜನ ಇಲ್ಲಿ ಒಂದು ಮುಖ್ಯವಾದ ನಿರ್ಣಯ ಕೈಗೊಳ್ಳಬೇಕಾಗಿದೆ. ಇದಕ್ಕಾಗಿ ನಾನು ಇವರ ಬಗ್ಗೆ ತಮ್ಮ ರೂಲಿಂಗು ಕೇಳುತ್ತೇನೆ.

Mr. DEPUTY SPEAKER.—The House has just given its consent to extend time by 20 minutes for this Resolution. So, the hon. members' apprehension is not well-founded. I know what the hon. member has in his mind. But he should not anticipate things. There is no Point of Order.

ಶ್ರೀ ಕಾಳೋಡು ತಿಮ್ಮಪ್ಪ.—ಹತ್ತಾರು ಖಾಸಗಿ ನಿರ್ಣಯಗಳನ್ನು ಇಲ್ಲಿ ಕಳುಹಿಸಿದ್ದರೂ ಇದರಲ್ಲಿ ಒಂದೆರಡು ಮಾತ್ರ ತೆಗೆದುಕೊಂಡು ಇಡೀ ದಿನ ಚರ್ಚೆ ಮಾಡುತ್ತಿದ್ದಾರೆ ಇತರ ನಿರ್ಣಯ ಗಳನ್ನು ಇಲ್ಲಿ ಏತಕ್ಕಾಗಿ ನಾವು ಕಳುಹಿಸಬೇಕು? ಆದಷ್ಟು ನಾವು ಕಳುಹಿಸುವ ನಿರ್ಣಯ ಗಳನ್ನು, ಇಲ್ಲಿ ಕಾಲ ನಿಗದಿಯಾಗಿರುವಂತೆ ತೆಗೆದುಕೊಳ್ಳಲು ತಾವು ಅವಕಾಶ ಮಾಡಿಕೊಡಬೇಕು. ಇದಕ್ಕೆ ಕಾಲವನ್ನು ಹೆಚ್ಚಿಸುತ್ತಾ ಹೋಗಬಾರದು.

ಶ್ರೀ ಕೆ. ಪ್ರಭಾಕರ್.—ಪ್ರೊಹಿಬಿಷನ್ ಒಗ್ಗೆ ನಮ್ಮದು ಒಂದು ಅತಿ ಮುಖ್ಯವಾದ ನಿರ್ಣಯ ತರಬೇಕಾಗಿದೆ.

ಶ್ರೀ ಎಸ್. ಎಂ. ಶಿರನಾಳ ಚಂದ್ರಶೇಖರ್.—ಇನ್ನು ಸಹಕಾರ ಸಂಘಗಳಲ್ಲಿರುವ ನೌಕರರು ಗಳ ಸೀನಿಯಾರಿಟಿ ಪಟ್ಟಿಯನ್ನು ಇನ್ನೂ ನಿರ್ಧಾರ ತಯಾರು ಮಾಡದೇ ಇರುವುದರಿಂ ಇಲ್ಲಿ ಕೆಲಸ ಮಾಡುವ ನೌಕರರುಗಳಲ್ಲಿ ಒಂದು ರೀತಿಯಾಗಿ ಅತೃಪ್ತಿ ನಿರುತ್ಸಾಹ ಹೆಚ್ಚುತ್ತಾ ಬರುತ್ತಿದೆ. ಕೆಲವರು ಒಂದೇ ಜಾಗದಲ್ಲಿ 20-25 ವರ್ಷಗಳಿಂದಲೂ ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರಿಗೆ ಯಾವ ಉತ್ತೇಜನವೂ ಕಂಡು ಬರುತ್ತಿಲ್ಲ. ಈ ನ್ಯೂನತೆಗಳನ್ನೆಲ್ಲಾ ನಿರಸಿಡಿಸಬೇಕೆಂದು ಕೋರುತ್ತೇನೆ. ಇವೆಲ್ಲಾ ನ್ಯೂನತೆಗಳನ್ನು ನಿರಸಿಡಿಸದೇ ಇದ್ದರೆ ಊಟಕ್ಕೆ ಇಲ್ಲದ ಉಪ್ಪಿನಕಾಯಿ ಯಂತಾಗುತ್ತದೆ. ಕೊನೇದಾಗಿ ಸಹಕಾರ ಸಂಘಗಳ ಚಿಕ್ಕಗೆ ಬಹಳ ಗೌರವ ಇದೆ. ಈ ಚಿಹ್ನೆಗೆ ಅಗೌರವ ಮಾಡುವಂತಹ ಕಾರ್ಯಕ್ಕೆ ಇಲ್ಲಿ ಅವಕಾಶ ಕೊಡಬಾರದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಶಂಕರ್ ಅಳ್ವ (ಸಹಕಾರ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಅನೇಕ ಸದಸ್ಯರು ಶ್ರೀಮಾನ್ ಕರಿಯಪ್ಪನವರ ರೆಸಲ್ಯೂಷನ್ ಬಗ್ಗೆ ಮಾತನಾಡುತ್ತಾ ಇದಕ್ಕೆ ಒಂದು ಸಮಿತಿ ನೇಮಕ ಮಾಡಬೇಕೆಂದು ಸಲಹೆ ಮಾಡಿದರು. ಅವರ ಉದ್ದೇಶ ಸರಿಯಾಗಿದೆ. ಅವರು ಕೇಳುವ ಪ್ರಕಾರ ಅನೇಕ ಸಹಕಾರ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡದೆ ಕಷ್ಟಗಳು ಬರುತ್ತಿವೆ, ಆದರೂ ಕೆಲವು ಸಹಕಾರ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಅವರು ಮೊದಲನೇದಾಗಿ ಇದರಲ್ಲಿರುವ ಆಫೀಸರವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದರ ಬಗ್ಗೆ ಡಿಪಾರ್ಟ್‌ಮೆಂಟಿನವರು ನೋಡಿ ಇದಬೇಕು ಎಂದು ಹೇಳಿದರು. ಸಾಧಾರಣವಾಗಿ ಈ ಸಲಹೆಯನ್ನು ಸರಕಾರವೂ ಒಪ್ಪ ಬಹುದು. ಮತ್ತು ಅವರು ಹೇಳುವ ಹಾಗೆ ಸಹಕಾರ ಪದ್ಧತಿ ಚೆನ್ನಾಗಿ ಬೆಳೆಯಬೇಕಾದರೆ ಅದರಲ್ಲಿ ಎಲ್ಲರೂ ಸಹಕರಿಸಿ ಕೆಲಸಗಳು ಚೆನ್ನಾಗಿ ನಡೆಯುವಂತೆ ಮಾಡಬೇಕು, ಸಹಕಾರ ವಿಧಾನವನ್ನು ಬಿಟ್ಟು ಬೇರೆ ಯಾವ ವಿಧಾನದಲ್ಲೂ ಕೆಲಸಗಳು ಚೆನ್ನಾಗಿ ಆಗುವುದಿಲ್ಲ ಎನ್ನುವುದನ್ನು ಇಲ್ಲಿ ಅನೇಕ ಮಿತ್ರರು ಒಪ್ಪಿಕೊಂಡಿದ್ದಾರೆ, ಮಾನ್ಯ ಸದಸ್ಯರಾದ ಶ್ರೀಮಾನ್ ಲಿಂಗಪ್ಪನವರು ಇನ್ನೂ ಮುಂದೆ ಕೂಡಾ ಸಹಕಾರ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಿದ್ದರೆ ಇದರಿಂದ ದೊಡ್ಡ ಅನಾಹುತ ಗಳಾಗುತ್ತವೆ ಎಂದೂ ಹೇಳಿದರು, ಇದನ್ನೇ ಶ್ರೀಮಾನ್ ಕಕ್ಕಿಲ್ಲಾಯರವರು ಹೇಳಿದರು, ಇದನ್ನು ಎಲ್ಲರೂ ಒಪ್ಪಬೇಕಾದುದೇ. ಈ ದೇಶದಲ್ಲಿ ಒಳ್ಳೆಯ ಸಹಕಾರ ಸಂಸ್ಥೆಗಳು ಇರಬೇಕು. ನಾನು ಅದಿಕೆ ಮಾಡಿಕೊಳ್ಳುವುದು ನಮ್ಮಲ್ಲಿರುವ ಈಗಿನ ಕಾನೂನುಗಳಲ್ಲೇ ಅನೇಕ ನಿಯಮಗಳು ಇರುತ್ತವೆ. ಅದನ್ನು ನಾವು ಸರಿಯಾಗಿ ಪಾಲಿಸಿದರೆ ಇಂತಹ ಒಂದು ಕಮಿಟಿ ನೇಮಕ ಮಾಡುವ ಅಗತ್ಯವಿರುವುದಿಲ್ಲ, ಈಗಿರುವ ಕೋ-ಆಪರೇಟಿವ್ ಸೊಸೈಟಿ ಆಕ್ಟ್‌ನಲ್ಲೇ ಬೇಕಾದಷ್ಟು ಕಲಂ ಗಳಿವೆ, ಅವನ್ನು ತೀವ್ರವಾಗಿ ಆಚರಣೆಯಲ್ಲಿ ತರಬೇಕು. ಉದಾಹರಣೆಯಾಗಿ ಸೆಕ್ಷನ್ 30 ಇದೆ, ಇದರೊಳಗೆ ಹೇಳಿರುವಂತೆ ತನಿಖೆ ಮಾಡಿ ಅಂತಹ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಲು ಅವಕಾಶ ಇದೆ. ಹಾಗೇ ಸೆಕ್ಷನ್ 54ರಲ್ಲಿ ಸರಕಾರದವರು ಎಂದು ಲಕ್ಷ ರೂಪಾಯಿಗಳ ಬಂಡವಾಳ ಹಾಕಿದ್ದರೆ ಅವನ್ನು ತನಿಖೆ ಮಾಡಲು ಸರಕಾರಕ್ಕೆ ಅವಕಾಶ ಇದೆ ಮತ್ತು ಇವು ಯಾವ ರೀತಿ ಕೆಲಸ ಮಾಡುತ್ತಿವೆ ಎನ್ನುವುದನ್ನು ತನಿಖೆ ಮಾಡಲೂ ಬರುತ್ತದೆ.

ಇನ್ನು ಸೆಕ್ಷನ್ 68ರ ಪ್ರಕಾರ ರಿಜಿಸ್ಟ್ರಾರ್‌ರವರು ತನಿಖೆಮಾಡುವಾಗ ಅದು ಸರಿಯಾಗಿ ನಡೆಯುದೇ ಇವ್ವಾಗ ಅವರು ಇದಕ್ಕೆ ಒಂದು ಸಮಯ ಕೊಟ್ಟು ಆ ಸಂಸ್ಥೆಯು ಸರಿಯಾಗಿ ಕೆಲಸ

(ಶ್ರೀ ಎ. ಶಂಕರ ಆಳ್ವ)

ಮಾಡುವುದೋ ಇಲ್ಲವೋ ಎನ್ನುವುದನ್ನು ನೋಡಿಕೊಂಡು ಅದು ಕೆಲಸಗಳನ್ನು ಸರಿಯಾಗಿ ಮಾಡದಿದ್ದರೆ ಅಂತಹ ಸಂಸ್ಥೆಯನ್ನು ಸೂಪರ್‌ಸೀಡ್ ಮಾಡುವ ಅಧಿಕಾರವೂ ಇರುತ್ತದೆ ಮತ್ತು ಎಲ್ಲಾದರೂ ಹಣ ದುರುಪಯೋಗವಾಗಿದ್ದರೆ ಅಂತಹ ಕಡೆಗಳಲ್ಲಿ ಹೆಚ್ಚು ನರ್ಷಾರ್ಜ್ ಹಾಕಿ ವಸೂಲು ಮಾಡಲೂ ಅವಕಾಶ ಇದೆ. ಇನ್ನು ಸಕ್ಷಮ 72ರಲ್ಲಿ ಸಹಕಾರ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡದೆ ನಷ್ಟದಲ್ಲಿದ್ದರೆ ಅಂತಹ ಸಂಸ್ಥೆಗಳನ್ನು ವೈಂಡ್ ಅಪ್ ಮಾಡುವುದು ಇಲ್ಲವೇ ಲಿಕ್ವಿಡೇಟು ಮಾಡಲೂ ಅವಕಾಶ ಇವೆ. ಇನ್ನು ರೂಲು 16ರ ಪ್ರಕಾರ ಯಾರಾದರೂ ಡೈರೆಕ್ಟರುಗಳು ಕಾನೂನಿಗೆ ವಿರೋಧವಾಗಿ ಕೆಲಸ ಮಾಡಿದರೆ ಅವರ ಮೇಲೆ ಇಲಾಖೆ ಅಧಿಕಾರಿಗಳು ಸೂಕ ಕ್ರಮ ತೆಗೆದುಕೊಳ್ಳಲೂ ಅವಕಾಶ ಇದೆ. ಅಪೆಕ್ಸ್ ಅಲ್ಲದೆ ದೊಡ್ಡ ದೊಡ್ಡ ಕೋ-ಆಪರೇಟಿವ್ ಬಾಂಕುಗಳನ್ನು ರಿಸರ್ವ್ ಬ್ಯಾಂಕಿನವರು ಆಗಾಗ್ಗೆ ತನಿಖೆ ಮಾಡಲು ಬರುತ್ತಾರೆ. ಅಂತಹ ಸಮಯದಲ್ಲಿ ಏನಾದರೂ ಅವ್ಯವಸ್ಥೆಗಳು ಆಗಿದ್ದರೆ ಅಂತಹ ಸಂಸ್ಥೆಗಳ ಮೇಲೆ ಕ್ರಮ ತೆಗೆದುಕೊಳ್ಳಲೂ ಅವಕಾಶ ಇದೆ, ಇಂತಹ ಸಂಸ್ಥೆಗಳನ್ನು ತನಿಖೆ ಮಾಡಲು ಸ್ಪೆಷಲ್ ಆಕೌಂಟ್ಸ್ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಇದ್ದಾರೆ. ಇವರು ಆಗಾಗ್ಗೆ ಆಡಿಟ್ ಮಾಡುತ್ತಿರುತ್ತಾರೆ ಮತ್ತು ಆಗಾಗ್ಗೆ ರಿಜಿಸ್ಟ್ರಿ ಬ್ಯಾಂಕಿನವರು ಅಪೆಕ್ಸ್ ಬ್ಯಾಂಕಿನವರು ಮತ್ತು ಎ. ಆರ್. ಸಿ. ಅವರು ಸಹ ಸ್ಪೆಷಲ್ ಸಂಸ್ಥೆಗಳು ಯಾವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ತೋರಿಸಿಕೊಡುತ್ತಿರುವುದಲ್ಲದೆ, ಸೊಸೈಟಿಗಳಲ್ಲಿರುವ ಲೋಪದೋಷಗಳನ್ನು ಸಹ ತೋರಿಸಿಕೊಡುತ್ತಿದ್ದಾರೆ. ಮತ್ತು ಕೋ-ಆಪರೇಟಿವ್ ಸೊಸೈಟಿಗಳ ಅಧಿಕಾರಿಗಳು ಯಾರು ಇದ್ದಾರೆ ಅವರು ಸಹ ಆಗಾಗ್ಗೆ ತನಿಖೆ ಮಾಡಿಕೊಂಡ ಬರುತ್ತಾರೆ. ಈಗಾಗಲೇ ಕೆಲಸ ಸರಿಯಾಗಿ ಮಾಡದಿರುವ ಕೆಲ ಸೊಸೈಟಿಗಳನ್ನು ಬರಖಾಸ್ತು ಮಾಡಿದ್ದೇವೆ. ಯಾವ ಯಾವ ಸೊಸೈಟಿಗಳಲ್ಲಿ ಸರಿಯಾಗಿ ನಡೆಯುತ್ತಿಲ್ಲ, ಯಾವ ಯಾವ ಸೊಸೈಟಿಗಳನ್ನು ಪುನರ್ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬ ಬಗ್ಗೆ ಒಂದು ಲಿಸ್ಟ್‌ನ್ನು ತಯಾರು ಮಾಡುವುದಕ್ಕೆ ಹೇಳಿದ್ದೇವೆ. ಯಾವ ಸೊಸೈಟಿಗಳನ್ನು ಪುನರ್ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ ಅನ್ನುವ ಬಗ್ಗೆ ಒಂದು ಲಿಸ್ಟ್‌ನ್ನು ತಯಾರಿಸಿಕೊಳ್ಳಲು ಹೇಳಿದ್ದೇವೆ. ಮತ್ತು ಸಾಧಾರಣವಾಗಿ ಕೆಲಸ ಮಾಡುವ ಸೊಸೈಟಿಗಳನ್ನು ರೀ-ವೈಟಲೈಸ್ ಮಾಡಬೇಕೆಂದು ಹೇಳಿದ್ದೇವೆ. ಸೊಸೈಟಿಗಳ ವ್ಯವಹಾರದಲ್ಲಿ ಏನು ಕುಂದು ಕೊರತೆಗಳನ್ನು ಎ ಬುದನ್ನು ಮತ್ತು ತೋರಿಸಿಕೊಟ್ಟಿದ್ದಾರೆ. ಏನೆಂದರೆ ಹಣ ದುರುಪಯೋಗವಾಗಿರುವುದು ಎರಡು ವರ್ಷದ ನಂತರ ಗೊತ್ತಾದರೆ ಅದನ್ನು ವಸೂಲು ಮಾಡುವುದಕ್ಕಾಗುವುದಿಲ್ಲ ಎಂಬುದು. ಆದನ್ನು ದುರಸ್ತಿ ಮಾಡುವುದಕ್ಕೆ ಒಂದು ಕಮಿಟಿ ನೇಮಕ ಮಾಡಿದ್ದೇವೆ. ಆ ಕಮಿಟಿಯಲ್ಲಿ ರಿಜಿಸ್ಟ್ರಾರ್ ಅವರು ಸೆಕೆಟರಿಯವರು ಇದ್ದಾರೆ ಅವರು ನೀಡಿದ ವರದಿ ನಂತರ ಅವರ ಬಗ್ಗೆ ಒಂದು ಬಿಲ್ಲನ್ನು ಈ ಸಭೆಯ ಮುಂದೆ ತರುವುದಕ್ಕೆ ಆಲೋಚನೆ ಮಾಡುತ್ತೇನೆ. ಮಾನ್ಯ ದೇವೇಗೌಡರು ಒಂದು ಉಪಯುಕ್ತವಾದ ಸಲಹೆಯನ್ನು ಕೊಟ್ಟರು.

ಶ್ರೀ ವಾಟಾಳ್ ನಾಗರಾಜ್.—ಮಾನ ಮಂತ್ರಿಗಳು ಬಹಳ ಒಳ್ಳೆಯವರು. ಅವರಿಗೆ ಒಳ್ಳೆಯ ಇಲಾಖೆ ಸಿಕ್ಕಿಲ್ಲ. ಕೋ-ಆಪರೇಟಿವ್ ಮಂತ್ರಿಮಂಡಲ ಎಲ್ಲ ಮುಚ್ಚಿಹೋದ ಮೇಲೆ, ಅದಕ್ಕೆ ಕಾಯಕಲ್ಪ ಕೊಡುವುದಕ್ಕಾಗಿ ಈ ಇಲಾಖೆಯನ್ನು ತಮಗೆ ಕೊಟ್ಟಿದ್ದಾರೆ.

ಶ್ರೀ ಎ. ಶಂಕರ ಆಳ್ವ.—ನಮಗೆ ಸಾವಕಾಶ ಸಮಯ ಕೊಟ್ಟರೆ ಎಲ್ಲವನ್ನು ದುರಸ್ತಿ ಮಾಡಬಹುದು. ಹಣ ದುರುಪಯೋಗ ಮಾಡಿದವರ ಬಗ್ಗೆ ಕೇಸ್‌ಗಳನ್ನು ಹಾಕಿ ನಂತರ ಯಾರೋ ಒತ್ತಡಕ್ಕೆ ಒಳಗಾಗಿ ಪಾಪಸ್ ಪಡೆಯುತ್ತಿದ್ದಾರೆಂದು ಮಾನ್ಯ ದೇವೇಗೌಡರು ಹೇಳಿದರು. ಹಣ ದುರುಪಯೋಗವಾಗಿರುವುದು ಕಂಡುಬಂದರೆ, ಆ ಸೊಸೆ ಟಿಯಲ್ಲಿರುವ ಅಧಿಕಾರಿಗಳು ಯಾವ ಸ್ಥಿತಿಗೆ ಸೇರಿದವರು ಎಂಬುದನ್ನು ನಾವು ನೋಡದೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಯಾರ ಒತ್ತಡಕ್ಕೂ ಒಳಗಾಗುತ್ತಿಲ್ಲ. ಮತ್ತು ಹಣ ದುರುಪಯೋಗ ಮಾಡಿದವರ ವಿರುದ್ಧ ಪೋಲೀಸಿನವರು ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಈಗ ಒಂದೇ ಕಡೆ ಅನೇಕ ವರ್ಷಗಳವರೆಗೆ ಅಧಿಕಾರಿಗಳು ಇರುವುದನ್ನು ನಾವು ನೋಡುತ್ತಿದ್ದೇವೆ. ಈ ಅಧಿಕಾರಿಗಳು ಮತ್ತು ಸೊಸೈಟಿಯ ಡೈರೆಕ್ಟರ್‌ಗಳು ಎರಡು ಮೂರು ವರ್ಷಗಳಾದರೂ ಮೀಟಿಂಗ್ ನಡೆಸುವುದಿಲ್ಲ. ಇದರಿಂದ ಹಣ ದುರುಪಯೋಗವಾಗಿರುವುದು ಗೊತ್ತಾಗುವುದಿಲ್ಲ. ಎರಡು ಮೂರು ವರ್ಷಗಳ ನಂತರ ದುರುಪಯೋಗವಾಗಿರುವುದು ಕಂಡುಬಂದರೆ ಆ ಹಣವನ್ನು ವಸೂಲು ಮಾಡುವುದು ಕಷ್ಟವಾಗುತ್ತದೆ. ಏಕೆಂದರೆ ಕ್ರಿಮಿನಲ್ ಕೋರ್ಟಿನಲ್ಲಿ ರುಜುವಾತು

ಕರಿಯಾಗಿ ಕೊಡಬೇಕಾಗುತ್ತದೆ. ಇದರು ಮೂರು ವರ್ಷದ ನಂತರ ರಾಜಪಾತ್ರೆ ಸಿಕ್ಕುವುದು ಕಷ್ಟವಾಗುತ್ತದೆ. ಈ ಕಾರಣದಿಂದಲೇ ಮ್ಯಾಜಿಸ್ಟ್ರೇಟ್ ಅವರು ರಾಜಪಾತ್ರ ನರಿಯಲ್ಲ ಎ ದು ತಳ್ಳಿಹಾಕಬಹುತ್ತಾರೆ. ಈ ರೀತಿ ಇನ್ನು ಮುಂದೆ ಆಗದಂತೆ ನರಿಪಡಿಸುವುದಕ್ಕೆ ಎಲ್ಲ ಕಾರ್ಯಕ್ರಮಗಳನ್ನು ಕೈಕೊಂಡಿದ್ದೇವೆ. ಮತ್ತು ಇದರ ಬಗ್ಗೆ ಆದಷ್ಟು ಬೇಗ ಶೀಘ್ರವಾಗಿ ಒಂದು ತಿದ್ದುಪಡಿ ತರುವ ಆಲೋಚನೆ ಮಾಡಿದ್ದೇವೆ. ಆದ್ದರಿಂದ ಮಾನ್ಯ ಕರಿಯಪ್ಪನವರ ಸೂಚನೆಯಂತೆ ಒಂದು ಪ್ರತ್ಯೇಕ ಕಮಿಟಿಯನ್ನು ಮಾಡಿದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಏಕೆಂದರೆ ನಾನು ಮೊದಲೇ ಕ್ಷಿಪ್ರ ಲೋಪದೋಷಗಳನ್ನು ಕಡಿಮೆ ಮಾಡಲು ಈಗಿರುವ ಆಕ್ಟ್‌ನಲ್ಲಿಯೇ ಎಲ್ಲ ರೂಲ್ಸ್‌ಗಳು ಅಡಕವಾಗಿವೆ. ರೂಲ್ಸ್‌ಗಳು ಇದ್ದರೂ ಸಹ ಜಾಗ್ರತೆ ಕಲಸ ಕಾರ್ಯಗಳಾಗ ತಿ ಲ್ಲ, ಆದ್ದರಿಂದ ಜಾಗ್ರತೆ ಕಲಸವ ಗುತಂತೆ ನೋಡಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಕೇಳಿದರು. ಮಾನ್ಯ ಅಧ್ಯಕ್ಷರ ವ ಲೂಕ ವಾನ್ಯ ಸದಸ್ಯರಲ್ಲಿ ಏನ ತಿ ಮಾಡಿಕೊಳ್ಳುವು ದೇನೆಂದರೆ, ಅವರವರ ಕ್ಷೇತ್ರಗಳಲ್ಲಿರುವ ಸೂಪರ್ ವೈಸಿಂಗ್ ಸರಿಯಾಗಿ ಕಲಸಗಳಾಗುತ್ತಿವೆಯೇ ಎಂಬುದನ್ನು ನೋಡಿಕೊಂಡು, ಏನಾದರೂ ಲೋಪದೋಷಗಳು ಇದ್ದರೆ ಕೂಡಲೇ ಸರ್ಕಾರಕ್ಕೆ ತಿಳಿಸಿದರೆ. ನಾವು ಸೂಕ ಕಾರ್ಯಕ್ರಮ ಕೈಕೊಳ್ಳುತ್ತೇವೆ. ನಮ್ಮ ಅಧಿಕಾರಿಗಳು ಸಹ ನೋಡುತ್ತಿರುತ್ತಾರೆ. ಆದರೆ ಕಲವ ಸಂದರ್ಭಗಳಲ್ಲಿ ಗೊತ್ತಾಗುವುದಿಲ್ಲ. ಏಕೆಂದರೆ ಇಂದು ಸಹಕಾರ ಸಂಘಗಳು ದೊಡ್ಡ ಪ್ರಮಾಣದಲ್ಲಿ ಬೆಳೆದಿವೆ. ಇಂದಸ್ಟ್ರಿಯಲ್ ಕೋ-ಆಪರೇಟಿವ್ಸ್, ಆರ್ಟಿಕಲ್ಚರಲ್ ಕೋ-ಆಪರೇಟಿವ್ಸ್, ಸಪ್ಲೈಸಲ್ ಕೋ-ಆಪರೇಟಿವ್ಸ್ ಎಂದು ಏನು ಇವೆ, ಅವುಗಳಲ್ಲಿ ಮಾನ್ಯ ಸದಸ್ಯರು ಸಕ್ರಿಯವಾಗಿ ಭಾಗವಹಿಸಬೇಕೆಂದು ಅವರಿಗೆ ಮಾಡಿಕೊಳ್ಳುತ್ತೇನೆ. ಈ ಚರ್ಚೆಯಲ್ಲಿ ಅನೇಕ ಮಾನ್ಯ ಸದಸ್ಯರು ಭಾಗವಹಿಸಿ ಅನೇಕ ಸಲಹೆಗಳನ್ನು ಏನು ಕೊಟ್ಟಿದ್ದಾರೆ ಅದನೆಲ್ಲಾ ಗಮನದಲ್ಲಿಟ್ಟುಕೊಂಡು ಇಂಥ ನ್ಯೂನತೆಗಳನ್ನೆಲ್ಲಾ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದ್ದರಿಂದ ಮಾನ್ಯ ಕರಿಯಪ್ಪನವರು ತಂದಿರುವ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಅರಿಕೆ ಮಾಡಿಕೊಂಡು ನನ್ನ ಸಲಹೆಗಳನ್ನು ಸಭೆಯ ಮುಂದೆ ಇಡುತ್ತೇನೆ.

Mr. DEPUTY SPEAKER.—In view of the assurance given by the Hon. Minister for Co-operation, I would like to know from Sri S. Kariappa whether he would withdraw his resolution. The Hon. Minister has appreciated the spirit of the resolution.

†ಶ್ರೀ ಎಸ್. ಕರಿಯಪ್ಪ.—ಮಾನ್ಯ ಅಧ್ಯಕ್ಷರೇ,ಮಾನ್ಯ ಸದಸ್ಯರೆಲ್ಲರೂ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟುಪುದರ ಮೂಲಕ ತಮ್ಮ ಪೂರ್ಣ ಬೆಂಬಲವನ್ನು ನನ್ನ ನಿರ್ಣಯಕ್ಕೆ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರೆಲ್ಲರಿಗೂ ಕೃತಜ್ಞನಾಗಿದ್ದೇನೆ. ಮಾನ್ಯ ಮಂತ್ರಿಗಳು ಒಂದು ದೊಡ್ಡ ಪಟ್ಟಿಯನ್ನು ಕೊಟ್ಟು ಇರತಕ್ಕಂಥ ಲೋಪದೋಷಗಳನ್ನು ಯಾವ ರೀತಿ ಪರಿಹಾರ ಮಾಡಬಹುದು ಮತ್ತು ಅದಕ್ಕೆ ಎಷ್ಟೊಂದು ಅವಕಾಶಗಳಿವೆ ಎಂಬುದನ್ನು ತಿಳಿಸಿದರು. ಕಳೆದ 25 ವರ್ಷಗಳಿಂದಲೂ ರೂಲ್ಸ್ ಇವೆ. ಕಾನೂನು ಭಾಗಗಳಿವೆ. ಆದರೆ ಲೋಪದೋಷಗಳಾಗುವುದು ತಪ್ಪಲಿಲ್ಲ. ಮುಂದಾದರೂ ಹೇಗೊ ಏನೋ ಎಂಬ ಅನುಮಾನವಿದೆ. ಲೋಪದೋಷಗಳನ್ನು ನರಿಪಡಿಸಬಲ್ಲೆ ಎಂಬ ಧೈರ್ಯ ಮಾನ್ಯ ಮಂತ್ರಿಗಳಿಗೆ ಇದೆ. ಎಲ್ಲ ಆಯುಧಗಳು ಇವೆ ಎಂದು ಅವರು ಹೇಳಿಕೊಂಡಿದ್ದಾರೆ. ನಾನು ಏತಕ್ಕೆ ಅದನ್ನು ನೋಡಬಾರದು ಎಂದು ಆಲೋಚನೆ ಮಾಡುತ್ತಿದ್ದೇನೆ. ಅವರು ಇಷ್ಟೊಂದು ಭರವಸೆ ಕೊಟ್ಟಮೇಲೆ ಅವರು ಕೊಟ್ಟಿರತಕ್ಕಂಥ ಭರವಸೆಯನ್ನೆಲ್ಲಾ ನಂಬಿಕೊಂಡು, ಇರುವ ಲೋಪದೋಷಗಳನ್ನೆಲ್ಲಾ ಅತ್ಯಲ್ಪ ಕಾಲದಲ್ಲಿಯೇ ನರಿಪಡಿಸುತ್ತಾರೆಂದು ನಂಬಿಕೊಂಡು ಈ ನನ್ನ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಲು ತಮ್ಮ ಅನುಮತಿ ಕೋರುತ್ತೇನೆ.

Mr. DEPUTY SPEAKER.—Does the House agree for the withdrawal of the resolutions by the hon. member?

HON. MEMBERS.—Yes.

Mr. DEPUTY SPEAKER.—The resolution was by leave of the House withdrawn. Now next resolution.